ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 39 | ಸೆಪ್ಟೆಂಬರ್ 28, 1980 | ಬೆಲೆ : 50 ಪೈಸೆ

"ಫ್ಯಾಸಿಸ್ಟ್ ಕ್ರಮ"

ಸಂಪಾದಕೀಯ

ತುರ್ತುಪರಿಸ್ಥಿತಿಯು ಜಾರಿಗೆ ಬರುವುದಕ್ಕೆ ಮೊದಲ ದಿನಗಳಲ್ಲಿ ಇಂದಿರಾಗಾಂಧಿ ಸರಕಾರ ಅನುಸರಿಸಿದ್ದ ಪ್ರಜಾಪ್ರಭುತ್ವ ವಿರೋಧಿ ಮತ್ತು ಅರೆಫ್ಯಾಸಿಸ್ಟ್ ಕ್ರಮಗಳು ಮತ್ತೆ ತಲೆ ಎತ್ತಿವೆ. ಹಿಂದೆ ಇದ್ದ ಮಿಸಾಕ್ಕೆ ಇನ್ನೊಂದು ಹೆಸರಿಟ್ಟು "ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ"ಯನ್ನು ಜಾರಿ ಮಾಡಿರುವುದು ಬೆಳೆದು ಬರುತ್ತಿರುವ ಜನಕೀಯ ಚಳುವಳಿಗಳನ್ನು ಹತ್ತಿಕ್ಕುವುದಕ್ಕೇ ಆಗಿದೆ. ಜನತೆಯ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿನ ವೈಫಲ್ಯ, ತನ್ನ ಪಕ್ಷದೊಳಗಿನ ತೀವ್ರ ಕಚ್ಚಾಟಗಳ ಹಿನ್ನೆಲೆಯಲ್ಲಿ ತನ್ನ ಹಾಗೂ ತನ್ನ ಪಕ್ಷದ ಅಧಿಕಾರವನ್ನು ಭದ್ರವಾಗಿಡುವುದಕ್ಕೆ ಬೇಕಾದ ಕ್ರಮಗಳನ್ನು ಹಂತಹಂತವಾಗಿ ತೆಗೆದುಕೊಳ್ಳುವುದು ಸ್ಪಷ್ಟವಾಗುತ್ತಲಿದೆ.

ತಾವೇ ಹೇಳಿದಂತೆ ಇಂದಿರಾಗಾಂಧಿಯ ಕೃಪಾಕಟಾಕ್ಷದಲ್ಲಿರುವ, ತಾನು ಜನತೆಯಿಂದ ಆಯ್ಕೆಯಾದ ವ್ಯಕ್ತಿ ಎಂಬುದನ್ನು ಮರೆತಿರುವ ಕರ್ನಾಟಕ ರಾಜ್ಯದ ಕಾಂಗ್ರೆಸ್ ಮುಖ್ಯಮಂತ್ರಿ ಶ್ರೀಮಾನ್ ಗುಂಡೂರಾವ್ ಅವರು ಇಂದಿರಾಗಾಂಧಿಗಿಂತಲೂ ಒಂದು ಹೆಜ್ಜೆ ಮುಂದಿದ್ದಾರೆ. ರಾಜ್ಯದಲ್ಲಿ ಜನವಿರೋಧಿ ಪೋಲೀಸ್ ನೀತಿಯನ್ನು ಅನುಸರಿಸಿ, ಪೋಲೀಸ್ ರಾಜ್ಯವನ್ನೆ ಕಟ್ಟುತ್ತಲಿರುವ ಗುಂಡೂರಾಯರು ಇದೀಗ ಫ್ಯಾಸಿಸ್ಟ್ ಕ್ರಮಗಳನ್ನು ಅನುಸರಿಸುತ್ತಿದ್ದಾರೆ. ಪತ್ರಿಕೆಗಳಲ್ಲಿ ತನ್ನ ಮೇಲೆ ಚಪ್ಪಲು ಎಸೆದುದಾಗಿ ತಪ್ಪು ವರದಿ ಬಂದಿದೆ ಎಂದು ಕಿಡಿಕಾರಿ ಬಹಿರಂಗ ಸಭೆಯಲ್ಲಿ ಪತ್ರಿಕಾಕರ್ತರನ್ನು ತುಚ್ಛೀಕರಿಸಿ ಮಾತನಾಡಿದ್ದಷ್ಟೇ ಅಲ್ಲ, ತನ್ನ "ಸ್ಟೋರ್ಮ್-ಟ್ರೂಪರ್ಸ್"ಗಳನ್ನು ಪತ್ರಿಕಾ ಕಛೇರಿಗಳಿಗೆ ನುಗ್ಗಿಸಿ, ಅಲ್ಲಿಯ ಕೆಲಸ ಕಾರ್ಯಗಳನ್ನು ಅಸ್ತವ್ಯಸ್ತಗೊಳಿಸುವಷ್ಟು ಮುಂದೆ ಹೋಗಿದ್ದಾರೆ ರಾಜ್ಯದ ಮುಖ್ಯಮಂತ್ರಿ. ಶಾಂತಿ ಕಾಪಾಡಬೇಕಾಗಿರುವ, ರಕ್ಷಣೆ ಕೊಡಬೇಕಾಗಿರುವ ಪೋಲೀಸರು, ಅತ್ಯುನ್ನತ ಪೋಲೀಸ್ ಅಧಿಕಾರಿಗಳೆದುರು ಗೂಂಡಾಗಿರಿ ನಡೆಸುವವರೀಗೆ ಅನುಕೂಲ ಮಾಡಿಕೊಟ್ಟಿರುವರು. ಪಶ್ಚಿಮ ಬಂಗಾಲದಲ್ಲಿ "ಛತ್ರ ಪರಿಷದ್" ಗೂಂಡಾಗಳು ನಡೆಸುತ್ತಿದ್ದ ಕ್ರಮಗಳನ್ನು ಇಲ್ಲಿ ಅನುಸರಿಸುವುದು ಸ್ಪಷ್ಟವಾಗುತ್ತಲಿದೆ. ಇದು ಪತ್ರಿಕಾ ಸ್ವಾತಂತ್ರ್ಯವನ್ನೇ ಮೊಟಕುಗೊಳಿಸುವುದಕ್ಕಾಗಿದೆ.

ಆದರೆ ರಾಜ್ಯದ ಪ್ರಜಾಪ್ರಭುತ್ವ ಶಕ್ತಿಗಳು, ದುಡಿಯುವ ಜನತೆ ಕಾಂಗ್ರೆಸ್‌ನ ಈ ಫ್ಯಾಸಿಸ್ಟ್ ಕ್ರಮಗಳನ್ನು ಸಹಿಸುವುದಿಲ್ಲ. ಈಗಾಗಲೇ ಒಂದುಗೂಡುತ್ತಿರುವ ಎಡ ಪ್ರಜಾಪ್ರಭುತ್ವ ಶಕ್ತಿಗಳು ರಾಜ್ಯದಲ್ಲೂ, ರಾಷ್ಟ್ರದಾದ್ಯಂತವೂ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳನ್ನು ಒಗ್ಗೂಡಿಸಿ ಕಾಂಗ್ರೆಸ್ ಸರಕಾರಗಳು ಪ್ರಜಾಪ್ರಭುತ್ವದ ಮೇಲೂ, ಪತ್ರಿಕಾ ಸ್ವಾತಂತ್ರ್ಯದ ಮೇಲೂ ನಡೆಸುವ ನಗ್ನ ಆಕ್ರಮಣವನ್ನು ವಿರೋಧಿಸಿ ಹಿಮ್ಮೆಟ್ಟಿಸಲೇ ಬೇಕು. ○

ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ

"ಜನಕೀಯ ಚಳುವಳಿ ದಮನಕ್ಕೆ"

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ರಾಷ್ಟ್ರಾಧ್ಯಕ್ಷರು ಜಾರಿಮಾಡಿರುವ ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಗೆ ತನ್ನ ಸಂಪೂರ್ಣ ವಿರೋಧವನ್ನು ವ್ಯಕ್ತಪಡಿಸಿದೆ.

ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆ ಮತ್ತು ಮುಂದೆ ಮಾಡಲಿರುವ ಕಾಯ್ದೆ ಈ ಹಿಂದೆ ಇದ್ದ "ಮಿಸಾ" ಕಾಯ್ದೆಯನ್ನು ಹೆಸರು ಬದಲಾಯಿಸಿ ಮತ್ತೆ ಜಾರಿಗೆ ತಂದಂತಾಗಿದೆ. ಸರಕಾರದ ವಕ್ತಾರರು ಹೇಳಿರುವ ರೀತಿಯಲ್ಲಿ ಈ ಸುಗ್ರೀವಾಜ್ಞೆಯನ್ನು ಸಮಾಜಘಾತುಕರ ಅಥವಾ ಕೋಮುವಾದಿಗಳ ವಿರುದ್ಧ ಉಪಯೋಗಿಸುವುದರ ಬದಲು ಇದನ್ನು ಜನಸಾಮಾನ್ಯರ ವಿರುದ್ಧ, ಅವರು ಹೋರಾಡುವ ಸಾಮೂಹಿಕ ಸಂಘಟನೆಗಳ ವಿರುದ್ಧ ಮತ್ತು ಜನತೆಯ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡುವ ರಾಜಕೀಯ ಪಕ್ಷಗಳ ವಿರುದ್ಧ ಉಪಯೋಗಿಸುವುದೇ ಸರಕಾರದ ಉದ್ದೇಶವಾಗಿದೆ.

ರಾಷ್ಟ್ರದ ಬೇರೆಬೇರೆಡೆಗಳಲ್ಲಿ ತಲೆ ಎತ್ತಿರುವ ಸಮಾಜಘಾತುಕ ಶಕ್ತಿಗಳಿಗೆ ಮತ್ತು ಕೋಮು ಶಕ್ತಿಗಳಿಗೆ ಸರಿಯಾದ ಶಿಕ್ಷೆ ಕೊಡಬೇಕೆಂಬ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ ಅಭಿಪ್ರಾಯವೇ ಸಿ.ಪಿ.ಐ.(ಎಂ)ನ ಅಭಿಪ್ರಾಯವೂ ಆಗಿದೆ ಆದರೆ ಕೇವಲ ಸರಕಾರಿ ಯಂತ್ರದ ಶಕ್ತಿಯ ಬಳಕೆಯ ಮೂಲಕ ಈ ಸಮಾಜಘಾತುಕ ಶಕ್ತಿಗಳನ್ನು ವಿರೋಧಿಸಿ ಸೋಲಿಸುವುದು ಅಸಾಧ್ಯವಾದ ಮಾತು. ಈ ಸಮಾಜಘಾತುಕಶಕ್ತಿಗಳ ವಿರುದ್ಧದ ಹೋರಾಟ ಮತ್ತು ದೇಶದ ಐಕ್ಯತೆ ಹಾಗೂ ಸಮಗ್ರತೆಗಳನ್ನು ಕಾಯ್ದುಕೊಳ್ಳುವ ಕೆಲಸದಲ್ಲಿ ಜನಸಾಮಾನ್ಯರು ಭಾಗವಹಿಸುವಂತೆ ಐಕ್ಯ ಪ್ರಯತ್ನಗಳು ಅವಶ್ಯವಿದೆ. ಈ ರೀತಿ ಜನತೆಯನ್ನು ಒಂದಾಗಿ ಭಾಗವಹಿಸುವಂತೆ ನಡೆಸುವ ಪ್ರಯತ್ನಗಳ ವಿರುದ್ಧವೇ ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಯಂತವುಗಳನ್ನು ಜಾರಿಗೊಳಿಸುವುದಾಗಿದೆ. ಜನತೆಯ ಹೋರಾಟಗಳನ್ನು ಸಂಘಟನಾ ಹಕ್ಕುಗಳನ್ನು ಹತ್ತಿಕ್ಕುವುದೇ ಇವುಗಳ ಉದ್ದೇಶವಾಗಿದೆ.

ಕೇಂದ್ರ ಸರಕಾರದ ಈ ಪ್ರಜಾಪ್ರಭುತ್ವ ವಿರೋಧಿ ಕ್ರಮದ ಹಾಗೂ ಕಾಂಗ್ರೆಸ್ ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಇದೇ ರೀತಿಯ ಕ್ರಮಗಳ ವಿರುದ್ಧ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಿ, ಜಂಟೀ ಹೋರಾಟಗಳನ್ನು ಬೆಳೆಸಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಕರೆ ಈಯುತ್ತದೆ. ●

ಜನತೆಯ ವಿಶ್ವಾಸಗಳಿಸಿ, ಜನತಂತ್ರವನ್ನು ರಕ್ಷಿಸಿ

ಪರ್ಯಾಯ ರೂಪಿಸುವಲ್ಲಿ ಮುಂದಾಗಲು ಕರೆ

ಕೇಂದ್ರದಲ್ಲಿ ಮತ್ತು ಹಲವು ರಾಜ್ಯಗಳಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರದ ಬಂಡವಾಳಶಾಹಿ-ಭೂಮಾಲಕ ಪರ ನೀತಿಗಳಿಂದಲಾಗಿ, ಜನತೆಯ ಸಮಸ್ಯೆ ಪರಿಹಾರವಾಗುವುದಂತಿರಲಿ, ಇವು ದಿನೇದಿನೇ ಬಿಗಿಯಾಗುತ್ತಿವೆ. ಕಾಂಗ್ರೆಸ್ ಸರಕಾರದ ಅಸಫಲತೆಯ ವಿರುದ್ಧ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಜನತೆಯು ಎಲ್ಲಾ ವಿಭಾಗ ಹೋರಾಟದ ದಾರಿಯನ್ನು ಅನುಸರಿಸುತ್ತಿದೆ. ಕಾಂಗ್ರೆಸ್ ಮತ್ತು ಜನತಾ ಸರಕಾರಗಳ ವಿಫಲತೆಯಿಂದ ಜನ ಕಂಗೆಟ್ಟಿರುವಾಗ ರಾಷ್ಟ್ರಮಟ್ಟದಲ್ಲಿ ಸಮಾನ ಅಭಿಪ್ರಾಯವನ್ನು ಹೊಂದಿದ ಪಕ್ಷಗಳನ್ನು ಮತ್ತು ಶಕ್ತಿಗಳನ್ನು ಒಂದುಸೇರಿಸಿ ಬೆಲೆಏರಿಕೆಯಂತಹ ತುರ್ತು ಸಮಸ್ಯೆ, ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ಮತ್ತು ಜಾತೀಯ ಮತ್ತು ಕೋಮು ಸೌಹಾರ್ದತೆಯ ರಕ್ಷಣೆಗಳಿಗಾಗಿ ಹೋರಾಡಲು ಇದೀಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮುಂದಾಗಿದೆ. ನವದೆಹಲಿಯಲ್ಲಿ ಆರು ಪಕ್ಷಗಳು ಸೆಪ್ಟೆಂಬರ್ 27 ಮತ್ತು 28 ರಂದು ನಡೆಸುವ ರಾಷ್ಟ್ರೀಯ ಮಟ್ಟದ ಸಮಾವೇಶವು, ರಾಷ್ಟ್ರವ್ಯಾಪಿ ಪ್ರಚಾರ ಮತ್ತು ಹೋರಾಟಗಳಿಗೆ ಯೋಜನೆ ಹಾಕಲಿದೆ.

ಕರ್ನಾಟಕ ರಾಜ್ಯದಲ್ಲೂ ಈ ದಿಸೆಯಲ್ಲಿ ಕೆಲಸ ಪ್ರಾರಂಭವಾಗಿದೆ. ಈಗಾಗಲೇ ಸಿ.ಪಿ.ಐ.(ಎಂ), ಸಿ.ಪಿ.ಐ, ಕಾಂಗ್ರೆಸ್(ಯು), ಲೋಕದಳ ಮತ್ತು ಪ್ರಗತಿಶೀಲ ಪಕ್ಷೇತರರು ಸೇರಿ ಈಗಾಗಲೇ ಈ ಬಗ್ಗೆ ಸಮಾಲೋಚನೆ ನಡೆಸಿದ್ದು, ರಾಷ್ಟ್ರೀಯ ಸಮಾವೇಶದ ನಂತರ ರಾಜ್ಯದಲ್ಲೂ ರಾಜ್ಯಮಟ್ಟದ ಸಮಾವೇಶ ನಡೆಯಲಿದೆ. ಈ ಸಮಾವೇಶವನ್ನೂ, ಜಂಟೀ ಹೋರಾಟಗ

(ಕಡೇ ಪುಟ ನೋಡಿ)



ಯುವ ಕಾಂಗ್ರೆಸ್‌ನ ಗೂಂಡಾಗಳು ದಿನಪತ್ರಿಕೆಗಳ ಕಾರ್ಯಾಲಯಕ್ಕೆ ಹಾಕಿದ್ದ ದಿಗ್ಬಂಧನವನ್ನು ಪ್ರತಿಭಟಿಸಿ ಸಿ.ಪಿ.ಐ.(ಎಂ)ನ ಬೆಂಗಳೂರು ಜಿಲ್ಲಾ ಸಮಿತಿ ಸೆ. 23ರಂದು ಪ್ರದರ್ಶನ ನಡೆಸಿದ ದೃಶ್ಯ

ರಂಗಭೂಮಿಯನ್ನು ಜನಜಾಗೃತಿಗಾಗಿ ಉಪಯೋಗಿಸಲು ಕರೆ

ದ.ಕ. ಜಿಲ್ಲಾ ಪುತ್ತೂರು ಸಮುದಾಯದವರು ತಾ. 11-9-80 ರಂದು ಉಪನ್ಯಾಸ ಮತ್ತು "ಹಾರುವ ಹಕ್ಕಿ" ನಾಟಕ ಪ್ರದರ್ಶನ ಏರ್ಪಡಿಸಿದ್ದರು. ಪುತ್ತೂರಿನ ಪುರಸಭೆ ಭವನದಲ್ಲಿ ಕಿಕ್ಕಿರಿದು ಸೇರಿದ್ದ ಸಭೆಗೆ ಉಪನ್ಯಾಸಕರಾಗಿ ಮಂಗಳಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಕೆ.ಸಿ. ಬಸವರಾಜ್ ಬಂದಿದ್ದರು. ಸ್ವಾಗತ ಭಾಷಣಮಾಡುತ್ತಾ "ಸಮುದಾಯ"ದ ಮುಖ್ಯ ಧ್ಯೇಯಧೋರಣೆಗಳ ಕಿರುಪರಿಚಯ ನೀಡುತ್ತಾ ಮೂಢನಂಬಿಕೆ ಅಂಧಶ್ರದ್ಧೆ ವಿರುದ್ಧ ಜನರ ಜಾಗೃತಿಯನ್ನುಂಟುಮಾಡಿ ವೈಜ್ಞಾನಿಕ ತಿಳುವಳಿಕೆಯನ್ನುಂಟು ಮಾಡುವುದೇ ಸಮುದಾಯದ ಗುರಿಯೆಂದರು ಸಮುದಾಯದ ಕಾರ್ಯದರ್ಶಿ ಎಸ್. ಸುಬ್ರಹ್ಮಣ್ಯಭಟ್.

ಉಪನ್ಯಾಸಕರಾದ ಬಸವರಾಜ್ ಅವರು ಮಾತನಾಡುತ್ತಾ ಪ್ರಾಚೀನ ರಂಗಭೂಮಿ ಮತ್ತು ಪ್ರಾಚೀನ ನಾಟಕ ಕರ್ತೃಗಳು ವ್ಯವಸ್ಥೆಯ ಪೋಷಣೆಯಲ್ಲೇ ಕಾಲಕಳೆದರು. ಶೋಷಿತ ವರ್ಗದವರಲ್ಲಿ ಹೊಸ ಜಾಗೃತಿಯನ್ನುಂಟುಮಾಡುವ ಬದಲು ಕಲೆ ಸಾಹಿತ್ಯಗಳ ಮೂಲಕ ಪೂರ್ವಜನ್ಮದ ಫಲಸಿದ್ಧಾಂತವನ್ನು ತುಂಬಲು ತಮ್ಮೆಲ್ಲಾ ಬುದ್ಧಿವಂತಿಕೆಯನ್ನು ಉಪಯೋಗಿಸಿಕೊಂಡರು.

ಆದರೆ ರಷ್ಯಾದ ಕ್ರಾಂತಿಯಾದ ಮೇಲೆ ಹೊಸ ತತ್ವ ಸಿದ್ಧಾಂತಗಳು ಹೆಚ್ಚೆಚ್ಚು ಬೆಳಕಿಗೆ ಬಂದಾಗ ಅದರಿಂದ ಪ್ರಭಾವಿತರಾದ ಸಾಹಿತಿಗಳು ನಾಟಕ ಕರ್ತೃಗಳು ಅಲ್ಪಸ್ವಲ್ಪ ಕೆಲಸಮಾಡಿ, ಹೊಸ ಜಾಗೃತಿಯನ್ನು ಪಸರಿಸುವಲ್ಲಿ ಯಶಸ್ವಿಯಾದರು.

ನಾಟಕ ಒಂದು ಉತ್ತಮ ಸಮೂಹ ಮಾಧ್ಯಮವಾಗಿದೆ. ಅತ್ಯಲ್ಪ ಖರ್ಚಿನಿಂದ, ಸರಳ ಸಲಕರಣೆಗಳ ಮೂಲಕ ವಾಸ್ತವಿಕತೆಯ ಜ್ಞಾನವನ್ನು ಜನರು ತಿಳಿಯಲು ನಾಟಕವನ್ನು ಬಳಸಿಕೊಳ್ಳಬೇಕಾಗಿದೆ.

ಸಿನೇಮಾವು ಅತ್ಯಂತ ಹೆಚ್ಚು ವೆಚ್ಚದ್ದಾಗಿದ್ದು, ಜನರಿಗೆ ಏನು ಹೇಳಬೇಕಾಗಿರುವುದೋ ಅದನ್ನು ಹೇಳಲು ಹೆಚ್ಚು ಅವಕಾಶವಿಲ್ಲ. ಇಂದಿನ ನಾಟಕ, ಸಿನೇಮಾಗಳು ಕೇವಲ ಧಾರ್ಮಿಕತೆಯನ್ನು, ಗೊಡ್ಡು ಸಂಪ್ರದಾಯಗಳ ಪ್ರಚಾರದಲ್ಲೇ ಕಾಲಯಾಪನೆ ಮಾಡುತ್ತಿವೆ

ಶೇ. 70ರಷ್ಟು ಅನಕ್ಷರಸ್ಥರಲ್ಲಿ ಜಾಗೃತಿಯನ್ನು ಹುಟ್ಟಿಸಲು ಅವರಲ್ಲಿ ಸಂಘರ್ಷ ಮನೋಭಾವನೆ ಬೆಳೆಸುವ ನಾಟಕಗಳ ತಯಾರಿ ಅಗತ್ಯವಿದೆ. ಕಾಲಕಾಲಕ್ಕೆ ಬದಲಾವಣೆ ಆಗುತ್ತಿರುವ ಸಾಮಾಜಿಕ ಮೌಲ್ಯಗಳ ಪ್ರಚಾರಕ್ಕೆ ಹೊಸ ನಾಟಕಗಳು ಪ್ರದರ್ಶನ ಆಗಬೇಕಾಗಿದೆ ಎಂದೂ, ಈ ದಿಸೆಯಲ್ಲಿ ಕಲಾವಿದರು, ನಾಟಕಕಾರರು ವ್ಯವಸ್ಥೆ ಬದಲಾವಣೆಯ ಉದ್ದೇಶವನ್ನಿಟ್ಟುಕೊಂಡು ಶ್ರಮಿಸಬೇಕೆಂದೂ, ವಿಚಾರವಂತ ಜನರು ಇದಕ್ಕೆ ಪ್ರೋತ್ಸಾಹವನ್ನು ನೀಡಬೇಕೆಂದು ಕೇಳಿಕೊಂಡರು.

ಕೊನೆಗೆ ಪುತ್ತೂರು ಸಮುದಾಯ ಬಳಗದವರಿಂದ "ಹಾರುವ ಹಕ್ಕಿ" ಎಂಬ ನಾಟಕ ಯಶಸ್ವಿಯಾಗಿ ಪ್ರದರ್ಶಿಸಲ್ಪಟ್ಟಿತು. ಈ ನಾಟಕವನ್ನು ಎಸ್. ಎಸ್. ಭಟ್ ಅವರು ನಿರ್ದೇಶಿಸಿದರು. ಈ ನಾಟಕವು ಪ್ರೇಕ್ಷಕರಿಂದ ಅಪಾರ ಮೆಚ್ಚುಗೆ ಗಳಿಸಿತು. ಕೊನೆಗೆ ಇ. ಕೆ. ಬೊಳ್ವಾರ್ ಅವರು ಧನ್ಯವಾದಗಳನ್ನರ್ಪಿಸಿದರು.

○

ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಲು ಮಂಗಳೂರು ಎಸ್. ಎಫ್. ಐ. ಒತ್ತಾಯ

ಮಂಗಳೂರು ಅಶೋಕ ನಗರದಲ್ಲಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯದಲ್ಲಿರುವ ಪ್ರತಿ ವಿದ್ಯಾರ್ಥಿಗೆ ಸರಕಾರದಿಂದ ತಿಂಗಳೊಂದಕ್ಕೆ ರೂ. 125 ಮಂಜೂರಾಗುತ್ತಿದ್ದರೂ, ಆ ಹಣ ವಿದ್ಯಾರ್ಥಿಗಳಿಗಾಗಿ ಪೂರ್ಣವಾಗಿ ವಿನಿಯೋಗಿಸಲ್ಪಡುತ್ತಿದ್ದಿಲ್ಲ. ಈ ವಿದ್ಯಾರ್ಥಿಗಳನ್ನು ವಿದ್ಯಾರ್ಥಿನಿಲಯದ ಆಡಳಿತದವರು ಬೆದರಿಸಿ ಆ ವಿದ್ಯಾರ್ಥಿಗಳು ಸಂಘಟಿತರಾಗದಂತೆ ಅವರನ್ನು ಬೆದರಿಸಲಾಗುತ್ತಿದೆ. ಅಲ್ಲಿಯ ವಿದ್ಯಾರ್ಥಿಗಳಿಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯವನ್ನು ಅವರ ಸ್ವಂತ ಆಸ್ತಿ ಎಂಬಂತೆ ನೋಡಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿನಿಲಯದ ಸ್ಥಳೀಯ ಆಡಳಿತದವರ ಈ ಕ್ರಮವನ್ನು ಎಸ್.ಎಫ್.ಐ, ಮಂಗಳೂರು ತಾಲ್ಲೂಕು ಸಮಿತಿ ಖಂಡಿಸಿದೆ ಮಾತ್ರವಲ್ಲ ಜಿಲ್ಲಾಧಿಕಾರಿಯವರು ಮತ್ತು ಸರಕಾರದವರು ಈ ವಿದ್ಯಾರ್ಥಿನಿಲಯದ ಅವ್ಯವಹಾರಗಳನ್ನು ಪರಿಶೀಲಿಸಿ, ಅಲ್ಲಿನ ಹಿಂದುಳಿದ ವಿದ್ಯಾರ್ಥಿಗಳ ಮೇಲೆ ಆಗುತ್ತಿರುವ ದಬ್ಬಾಳಿಕೆ ಮತ್ತು ಅನ್ಯಾಯವನ್ನು ಕೊನೆಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಮಂಗಳೂರಿನ ಕರ್ನಾಟಕ ಪಾಲಿಟೆಕ್ನಿಕ್ ಮತ್ತು ಸರಕಾರಿ ಕಾಲೇಜು ಪ್ರಾರಂಭವಾಗಿ ನಾಲ್ಕು ತಿಂಗಳಾಗುತ್ತಾ ಬಂದರೂ ಇನ್ನೂ ಕೂಡ ಅಲ್ಲಿ ಸರಿಯಾದ ಪ್ರಾಧ್ಯಾಪಕರುಗಳಿಲ್ಲದೆ, ವಿದ್ಯಾರ್ಥಿಗಳು ತೊಂದರೆಗೀಡಾಗಿದ್ದಾರೆ. ಸರಿಯಾದ ವಸತಿ ಸೌಕರ್ಯವಿಲ್ಲದೆ ಪ್ರಾಧ್ಯಾಪಕರುಗಳು ತೊಂದರೆಗೆ ಒಳಪಡುವುದರಿಂದ, ಈ ಕೂಡಲೇ ಅವರಿಗೆ ಸರಿಯಾದ ವಸತಿ ವ್ಯವಸ್ಥೆಯನ್ನು ನೀಡಬೇಕೆಂದು ಎಸ್.ಎಫ್.ಐ ಒತ್ತಾಯಿಸಿದೆ. ಈ ಕೂಡಲೇ ಪ್ರಾಧ್ಯಾಪಕರುಗಳ ಕೊರತೆಯನ್ನು ನೀಗಿಸದಿದ್ದರೆ ವಿದ್ಯಾರ್ಥಿಗಳು ಸಂಘಟಿತರಾಗಿ ಇದಕ್ಕಾಗಿ ಹೋರಾಡುವುದು ಅನಿವಾರ್ಯ ಎಂದು ಎಸ್.ಎಫ್.ಐ. ಸರಕಾರವನ್ನು ಎಚ್ಚರಿಸಿದೆ.

ಸರಕಾರಿ ಕಾಲೇಜಿನಲ್ಲಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ಮಧ್ಯಾಹ್ನದ ಉಪಹಾರ ಯೋಜನೆಯನ್ನು ಈಗೆರಡು ವರ್ಷಗಳಿಂದ ನಿಲ್ಲಿಸಲಾಗಿದೆ. ಇದರಿಂದ ದೂರದಿಂದ ಬರುವ ನೂರಾರು ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಈ ಬಡ ವಿದ್ಯಾರ್ಥಿಗಳು ಈಗಿನ ದುಬಾರಿ ಹೋಟೆಲನ್ನು ಅನಿವಾರ್ಯವಾಗಿ ಅವಲಂಭಿಸಲ್ಪಡಬೇಕಾದ ಕಾರಣ ಆರ್ಥಿಕವಾಗಿ ಕಂಗೆಟ್ಟಿದ್ದಾರೆ. ಆದ್ದರಿಂದ ಕೂಡಲೇ ಅಲ್ಲಿ ಮಧ್ಯಾಹ್ನದ ಉಪಹಾರ ವ್ಯವಸ್ಥೆಯನ್ನು ಪುನಃ ಆರಂಭಿಸಬೇಕೆಂದು ಎಸ್. ಎಫ್. ಐ. ಸರಕಾರವನ್ನು ಮತ್ತು ಸಂಬಂಧಪಟ್ಟವರನ್ನು ಒತ್ತಾಯಿಸಿದೆ.

○

ಗುಡಿಸಲು ವಾಸಿಗಳ ಹೋರಾಟ

ತಾ. 15-9-80 ರಂದು ಮಧ್ಯಾಹ್ನ ಹರಿಹರದ ಬಡಾವಣೆಯಲ್ಲಿರುವ ಗುಡಿಸಲು ವಾಸಿಗಳು ವಾಸಿಸುವ ಸ್ಥಳ ಖಾಯಂಗೊಳಿಸಬೇಕು, ಕೆಲವು ಹಿತಾಸಕ್ತಿಗಳು ಕೊಡುವ ಕಿರುಕುಳ ನಿಲ್ಲಬೇಕೆಂದು ಘೋಷಣೆ ಕೂಗುತ್ತಾ ಮಹಿಳೆಯರೂ ಮತ್ತು ಚಿಕ್ಕಮಕ್ಕಳೂ ಸೇರಿದಂತೆ ನೂರಾರು ಮಂದಿಯೊಂದಿಗೆ ಮೆರವಣಿಗೆಯಲ್ಲಿ ಹೋಗಿ ತಹಸೀಲ್ದಾರರಿಗೆ ಮನವಿ ಅರ್ಪಿಸಿದರು. ಗುಡಿಸಲು ವಾಸಿಗಳ ಮನವಿ ತೆಗೆದುಕೊಂಡ ತಹಸೀಲ್ದಾರರವರು ಅದೇ ರಾತ್ರಿ 8ಕ್ಕೆ ಸಭೆ ಕರೆದಿರುವರೆಂದು ವರದಿಯಾಗಿದೆ. ಮೆರವಣಿಗೆಯ ನೇತೃತ್ವವನ್ನು ಕಾಂ. ಮದಾರಸಾಬ್, ಕಾಂ. ಜೋಷಿ, ಕಾಂ. ನಾರಾಯಣ ಸಾ ಮೊದಲಾದವರು ವಹಿಸಿದ್ದರು.

●

ಹರಿಹರದಲ್ಲಿ ಕಾರ್ಮಿಕ ಮತ್ತು ಜನ ಸಾಮಾನ್ಯರ ಹೋರಾಟಗಳು

ಹರಿಹರ ಪಾಲಿಫೈಬರ್ ಕನ್‌ಸ್ಟ್ರಕ್ಷನ್ ವರ್ಕರ್ಸ್ ಸಂಘದ ಸರ್ವಸದಸ್ಯರ ಸಭೆಯು ತಾ. 15-9-80 ರಂದು ಸಂಜೆ 5-30ಕ್ಕೆ ಕಾರ್ಖಾನೆಯ ಮುಂಭಾಗದಲ್ಲಿ ಸೇರಿತು. ಯೂನಿಯನ್ ರಚನೆಯಾಗಿ ಹೋರಾಡಿದ ಮೇಲೆ ಕಂಟ್ರಾಕ್ಟ್ ಪದ್ಧತಿಯಲ್ಲಿದ್ದ ಕೆಲಸಗಾರರನ್ನು ಖಾಯಂ ಕೆಲಸಗಾರರಾಗಿ ಪರಿವರ್ತಿಸಿದ ಹಿನ್ನೆಲೆಯಲ್ಲಿ ಯೂನಿಯನ್ನಿನ ಹೆಸರನ್ನು ಹರಿಹರ ಪಾಲಿಫೈಬರ್ ವರ್ಕರ್ಸ್ ಯೂನಿಯನ್ ಎಂದು ಬದಲಾಯಿಸಲು ತೀರ್ಮಾನಿಸಲಾಯ್ತು. ಸಭೆಗೆ ಮುಖ್ಯ ಅತಿಥಿಗಳಾಗಿ ಬಂದಿದ್ದ ಕಿರ್ಲೋಸ್ಕರ್ ಕಾರ್ಮಿಕರ ಮುಖಂಡರುಗಳಾದ ಕಾಂ. ಡಿ. ಜಿ. ಜೋಷಿ ಮತ್ತು ಕಾಂ. ನಾರಾಯಣ ಸಾರವರು ಮಾಲೀಕವರ್ಗದ ಪಿತೂರಿಯನ್ನು ಖಂಡಿಸಿ, ಕಾರ್ಮಿಕರಿಗೆ ಸಂಘಟನೆ ಬಗ್ಗೆ ತಿಳುವಳಿಕೆ ನೀಡಿದರು. ಪಾಲಿಫೈಬರ್ ಎಂಪ್ಲಾಯೀಸ್ ಯೂನಿಯನ್ನಿನ ಮತ್ತು ಊರಿನ ಜನತೆಯ ಸಹಕಾರದಿಂದ ಈ ಯೂನಿಯನ್ನು ಮುಂದಿಟ್ಟ ಶೇ. 25 ಬೋನಸ್ಸಿನ ಬೇಡಿಕೆ ಈಡೇರುವ ತನಕವೂ ಹೋರಾಡಲು ಜೋಷಿ ಕರೆಇತ್ತರು. ಸಿ. ಪಿ. ಐ. (ಎಂ) ಮುಖಂಡರಾದ ಕಾಂ ಉನ್ನಿತ್ತನ್, ಕಾರ್ಮಿಕರು ರಾಜಕೀಯವಾಗಿ ಪ್ರಜ್ಞೆ ಬೆಳೆಸಲು ಕರೆಇತ್ತ ಮೇಲೆ ಸಭೆ ಮುಕ್ತಾಯವಾಯಿತು.

○

ಪರಿಹಾರ ಕಾರ್ಯ ಆರಂಭಿಸಲು ರೈತಸಂಘ ಅಧ್ಯಕ್ಷರ ಒತ್ತಾಯ

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಎಚ್. ಮುಗ.ಮಾಳಪ್ಪ ಅವರು ಹೇಳಿಕೆಯೊಂದನ್ನು ನೀಡಿ, ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈಗಾಗಲೇ ಕ್ಷಾಮ ಆರಂಭವಾಗಿರುವುದರಿಂದ ಸರ್ಕಾರ ಕೂಡಲೇ ಕ್ಷಾಮ ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಕರ್ನಾಟಕದ ದ.ಕ. ಜಿಲ್ಲೆ, ಉ. ಕ. ಜಿಲ್ಲೆ, ಶಿವಮೊಗ್ಗ ಮತ್ತು ಕೊಡಗು ಜಿಲ್ಲೆಗಳನ್ನು ಬಿಟ್ಟರೆ ಬೇರೆಲ್ಲೂ ಮುಂಗಾರು ಮಳೆ ಬಾರದೆ ಬೆಳೆ ನಾಶವಾಗಿದೆ, ರೈತರು ಕಂಗಾಲಾಗಿದ್ದಾರೆ ಮತ್ತು ದನಕರು ಮೇವಿಲ್ಲದೆ ಸೊರಗುತ್ತಿವೆ. ಕೋಲಾರ ಜಿಲ್ಲೆಯಂತಹ ಜಿಲ್ಲೆಗಳನ್ನು ಪೂರ್ಣ ಕ್ಷಾಮ ಪ್ರದೇಶವೆಂದು ಮತ್ತು ಇತರ ಜಿಲ್ಲೆಗಳನ್ನು ಭಾಗಶಃ ಕ್ಷಾಮ ಪ್ರದೇಶವೆಂದು ಘೋಷಿಸಿ ಸರ್ಕಾರ ನಿವಾರಣಾ ಕಾಮಗಾರಿ ಕೆಲಸ ಮುಂತಾದುವನ್ನು ಕೈಗೊಳ್ಳಬೇಕು. ಕೃಷಿ ಕೂಲಿಕಾರರು ಈಗ ಹಸಿವಿನ ದವಡೆಯಲ್ಲಿ ನರಳುತ್ತಿದ್ದಾರೆ. ಆದರೆ ದಿನ ಬಳಕೆ ವಸ್ತುಗಳ ಬೆಲೆ ವಿಪರೀತ ಏರುತ್ತಿದೆ. ಬಡವರ ಆಹಾರವಾದ ರಾಗಿ ಮತ್ತು ಜೋಳವನ್ನು ಗ್ರಾಮಾಂತರ ಪ್ರದೇಶಗಳಲ್ಲೂ ನಿಗದಿಯಾದ ಬೆಲೆಗೆ ನ್ಯಾಯಬೆಲೆ ಅಂಗಡಿಗಳ ಮೂಲಕ ಒದಗಿಸಬೇಕು. ದನಕರುಗಳಿಗೆ ಉಚಿತ ಮೇವು ಹಂಚಬೇಕು ಎಂದು ಅವರು ಸರ್ಕಾರವನ್ನು ಒತ್ತಾಯಿಸಿದ್ದಾರೆ,

ಸರ್ಕಾರ ಈ ಪರಿಹಾರ ಕಾರ್ಯಗಳನ್ನು ಕೈಗೊಳ್ಳದೆ ಇದ್ದಲ್ಲಿ ರಾಜ್ಯದಾದ್ಯಂತ ರೈತಸಂಘದ ಸಮಿತಿಗಳು ರೈತ ಚಳುವಳಿಯನ್ನು ಆರಂಭಿಸಲು ಅವರು ಕರೆ ನೀಡಿದ್ದಾರೆ.

●

ಕುಂಪಲ ಪ್ರದೇಶ ಯುವಜನರ ಸಭೆ

ಇದೇ ತಾ. 14. 9. 80 ರಂದು ಬೆಳಗ್ಗೆ ಘಂಟೆ 9ಕ್ಕೆ ಸರಿಯಾಗಿ ಮಂಗಳೂರು ತಾಲ್ಲೂಕು ಕುಂಪಲ ಪ್ರದೇಶ ಯುವಜನರ ಸಭೆಯು ಕಾಂ. ಲಿಗೋರಿ ಫಿಂಟೊ ಇವರ ಘನ ಅಧ್ಯಕ್ಷತೆಯಲ್ಲಿ ಜರುಗಿತು ಈ ಸಭೆಯಲ್ಲಿ ಮಂಗಳೂರು ತಾಲ್ಲೂಕು ಯುವಜನ ಸಂಚಾಲಕ ಬಿ. ಉಮಾನಾಥ್ ಇವರು ಭಾಗವಹಿಸಿ ಕರ್ನಾಟಕ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಧ್ಯೇಯ ಧೋರಣೆಗಳನ್ನು ವಿವರಿಸಿ ಯುವಜನರು ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ವಿವರಿಸಿದರು ಈ ಸಭೆಯಲ್ಲಿ ರಾಜ್ಯ ಸಮುದಾಯದ ಉಪಾಧ್ಯಕ್ಷ ಹಾಗೂ ಮಂಗಳೂರು ಸಮುದಾಯದ ಅಧ್ಯಕ್ಷ ಬಿ. ಮಾಧವನವರು ಭಾಗವಹಿಸಿ ಯುವ ಜನಾಂಗ ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿ ಬಂಡವಾಳಶಾಹಿ ಸಮಾಜದಲ್ಲಿ ಬಡಜನರಿಗೆ ಮಾರಕವಾದ ಅನೇಕ ಕೆಡುಕುಗಳನ್ನು ಉಂಟುಮಾಡುವ ಮೂಢನಂಬಿಕೆ, ಜಾತೀಯತೆ, ಧರ್ಮದ ಹೆಸರಲ್ಲಿ ಮಾಡುವ ಬಲಪ್ರತಿಗಾಮಿಗಳ ಪಿತೂರಿಯನ್ನು ಸಂಘಟಿತ ಯುವಜನಾಂಗವು ಸೋಲಿಸಲು ಸಾಧ್ಯವೆಂಬುದನ್ನು ವಿವರಿಸಿದರು. ಕುಂಪಲ ಪ್ರದೇಶ ಯುವಕ ಯುವತಿಯರು ಸಂಘಟಿತರಾಗಿ ಸಮಾಜ ವಿರೋಧಿ ಶಕ್ತಿಗಳ ಸಂಚನ್ನು ಸೋಲಿಸಲು ಮುಂದಾಗಬೇಕೆಂದು ವಿನಂತಿಸಿದರು. ಕೊನೆಗೆ 8 ಯುವಕರು, 2 ಯುವತಿಯರೂ ಇರುವ ಒಂದು ಸಮಿತಿಯನ್ನು ಆರಿಸಲಾಯಿತು. ಸಮಿತಿಯ ಕನ್ವೀನರರಾಗಿ ಪರಮೇಶ್ವರ ಮತ್ತು ಸಹಾಯಕರಾಗಿ ಶ್ರೀಧರ ಇವರನ್ನು ಆರಿಸಲಾಯಿತು.

●

ಕಾಂಗ್ರೆಸ್ ಗೂಂಡಾಗಳ ಹೇಯಕೃತ್ಯದ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರತಿಭಟನೆ

23-9-80ರಂದು ಮಧ್ಯಾಹ್ನ 12 ಘಂಟೆ. ಪಕ್ಷದ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ ವಿ.ಜೆ.ಕೆ ನಾಯರ್ ಅವರಿಗೆ ಪತ್ರಕರ್ತರೊಬ್ಬರ ಫೋನ ಕರೆ ಬಂದಿತು. ಫೋನಿನಲ್ಲಿ ಅವರು ಹಿಂದಿನ ದಿನ (22-9-80) ನಗರದ ಪ್ರಮುಖ ಪತ್ರಿಕಾಲಯಗಳ ಮೇಲೆ ಕಾಂಗ್ರೆಸ್ ಗೂಂಡಾದಾಳಿಯ ವಿವರ ನೀಡಿದರು. ರಾಜ್ಯದ ರಾಜಧಾನಿಯಲ್ಲಿ ನಡೆದ ಈ ಘಟನೆಯ ಬಗ್ಗೆ ತಮ್ಮ ದಿಗ್ಭ್ರಾಂತಿ ವ್ಯಕ್ತಪಡಿಸಿದ ಕಾಂ. ನಾಯರ್ ತಕ್ಷಣ ಪಕ್ಷದ ಪರವಾಗಿ ಪ್ರತಿಭಟನೆ ಪ್ರದರ್ಶನ ಏರ್ಪಡಿಸಲು ಕಾರ್ಯಪ್ರವೃತ್ತರಾದರು.

ಉತ್ತರ ಕರ್ನಾಟಕದ ಪ್ರವಾಸ ಕೈಗೊಂಡಿದ್ದ ಮುಖ್ಯಮಂತ್ರಿ ಗುಂಡೂರಾವ್ ಮೇಲೆ ಬಿಜೆಪಿ ಕಾರ್ಯಕರ್ತರು ಚಪ್ಪಲಿ ಎಸೆದರೆಂಬ ಪತ್ರಿಕಾ ವರದಿ 22-9-80ರಂದು ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಪತ್ರಿಕಾ ವರದಿಯನ್ನು ನೋಡಿ ಮತಿಯನ್ನು ಕಳೆದುಕೊಂಡ ಮುಖ್ಯಮಂತ್ರಿ ಮಂಗಳೂರಿನಲ್ಲಿ ನಡೆದ ಬಹಿರಂಗ ಸಭೆಯಲ್ಲಿ ವರ್ತಿಸಿದ ವರ್ತನೆ ತುಂಬಾ ಅಸಭ್ಯವಾಗಿತ್ತು.

ಮಂಗಳೂರಲ್ಲಿಯ ಸಭೆಯಲ್ಲಿ ಗುಂಡೂರಾಯರ ಮುಕ್ತಾಫಲಗಳು :

"ಥೂ ನಿಮ್ಮ! ನಿಮ್ಮ ಬಾಳು ಬೀದೀಲಿ ಹೋಗೋ ನಾಯಿನರಿಗಳಿಗಿಂತ ಕಡೆ", "ನೀವು ಹಣ ತೊಗೊಂಡು ಬರೀತೀರಿ. ಮಾಲೀಕರು ಹಣ ತೊಗೋತಾರೆ ಕುಯುಕ್ತಿ ಮಾಡುತ್ತೀರಿ", "ಇಂಥ ನಾಯಿಬಾಳು ಬದುಕುವದಕ್ಕಿಂತ ಹೋಗಿ ಅರಬ್ಬಿ ಸಮುದ್ರ ಬಂಗಾಳಕೊಲ್ಲಿಗೆ ಬೀಳಿ" (ಇವು ಪತ್ರಕರ್ತರನ್ನುದ್ದೇಶಿಸಿ), ಮುಂದುವರೆದು "ನನಗೆ ಚಪ್ಪಲೀಲಿ ಹೊಡೆವಾ ಬದುಕೋರು ಯಾರಿದ್ದಾರೆ! ಬಿಜೆಪಿ ಯುವರು ಚಪ್ಪಲೀಲಿ ಹೊಡೆದಿದ್ದಾರೆ ವಾಜಪೇಯಿ, ಅಡ್ವಾನಿ ಅವರು ಕರ್ನಾಟಕದಲ್ಲಿ ಕಾಲಿಡಲು ಆಗೋಲ್ಲ", "ಗದಗ್‌ನಲ್ಲಿ ನಾನು "ಹ್ಞೂ" ಅಂದಿದ್ದರೆ ರಕ್ತ ಕ್ರಾಂತಿ ಆಗುತ್ತಿತ್ತು", "ಈ ದೇಶದಲ್ಲಿ ಪ್ರಜಾಸತ್ತೆ ಸತ್ತರೆ ಅದಕ್ಕೆ ವಿರೋಧಿ ಪಕ್ಷದವರು ಹಾಗೂ ಪತ್ರಕರ್ತರೇ ಕಾರಣ".

ಈ ಪೋಲಿನ ಮಾತುಗಳು, ಒಂದು ರಾಜ್ಯದ ಮುಖ್ಯಮಂತ್ರಿಯಿಂದ ಬಂದಿದ್ದು!

22-9-80ರಂದು ಬಹುಶಃ ತಮ್ಮ ಮಹಾನಾಯಕನಿಂದ ಪ್ರಚೋದನೆ ಪಡೆದೋ ಏನೋ ಕೆಲವು ಉನ್ಮತ್ತ ಕಾಂಗ್ರೆಸ್ ಗೂಂಡಾಗಳು ನಗರದ ಪ್ರಮುಖಪತ್ರಿಕೆ (ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್-ಕನ್ನಡ ಪ್ರಭ) ಕಾರ್ಯಾಲಯಗಳ ಮೇಲೆ ಹಲ್ಲೆ ಮಾಡಿದರು. ರಾತ್ರಿ 9-30ಕ್ಕೆ ಇಂದಿರಾಗಾಂಧಿ, ಗುಂಡೂರಾವ್‌ಗೆ ಜೈಕಾರ ಹಾಕುತ್ತಿದ್ದ ಗುಂಪೊಂದು ಅತೀ ಅಸಭ್ಯವಾಗಿ ಪತ್ರಿಕಾಕರ್ತರನ್ನು ದೂಷಿಸುತ್ತಾ ಕಾರ್ಯಾಲಯಗಳಿಗೆ ಮುತ್ತಿಗೆ ಹಾಕಿದರು. ಬಹುಶಃ ದೇಶದಲ್ಲೆ ಪ್ರಥಮವಾಗಿ ಈ ತರದ ಹೀನಕೃತ್ಯವು ಪೋಲೀಸರ ಕಣ್ಣೆದುರಲ್ಲೇ ರಾಜಾರೋಷವಾಗಿ ನಡೆಯಿತು.

ರಾತ್ರಿಯ ಪಾಳಿಯಲ್ಲಿದ್ದ ಪತ್ರಕರ್ತರು, ನೌಕರರು ಸುಮಾರು 12 ಘಂಟೆಗಳಿಗೂ ಹೆಚ್ಚು ಹೊತ್ತು ದಿಗ್ಬಂಧನಕ್ಕೊಳಗಾದರು. ಕಾರಣ ಬೆಳಗಿನ ಪತ್ರಿಕೆಗಳು ಓದುಗರ ಕೈ ಸೇರಲಿಲ್ಲ. ಬೇರೆಡೆ ಪತ್ರಿಕೆಗಳನ್ನು ಕೊಂಡೊಯ್ಯಲು ಸಿದ್ಧವಾಗಿದ್ದ ವಾಹನಗಳನ್ನು ಕಾಂಗ್ರೆಸ್ ಗೂಂಡಾಗಳು ಹೊರಡಲು ಬಿಡಲಿಲ್ಲ "ಸಂಜಯ ಗಾಂಧಿ ಅಮರ ಹೈ" ಎಂದು ಕೂಗುತ್ತಿದ್ದ ಗುಂಪು ಕಾರ್ಯಾಲಯದ ಎದುರು ಬಂದು ಮಾಡಿದ ಮೊದಲ ಕೆಲಸವೆಂದರೆ ಕಾರ್ಯಾಲಯಗಳಿಗೆ ಬೀಗ ಜಡೆದದ್ದು. ಕಾರಣ ಕೇಳಲು ಹೋದ ಸಿಬ್ಬಂದಿಯವರಿಗೆ ಒಳಗೆ ಹೋಗಿ, ಇಲ್ಲವಾದರೆ ಸೈಕಲ್ ಚೈನ್ ಚೂರಿ ಏಟು ಬೀಳುತ್ತವೆ ಎಂದು ಬೆದರಿಸಲಾಯಿತು.

ಪೋಲೀಸರ ವರ್ತನೆ :

ಪತ್ರಿಕಾ ನೌಕರರನ್ನು ಗೂಂಡಾಗಳ ಗುಂಪೊಂದು ಬಂದಿಗಳನ್ನಾಗಿ ಮಾಡಿರುವುದರ ವಿರುದ್ಧ ತಕ್ಷಣ ದೂರನ್ನು ಪೋಲೀಸ್ ಕಮೀಷನರರಿಗೆ ಕೊಡಲಾಯಿತು. "ಸರಿ ಮಾಡೋಣ" ಎಂಬ ಆಶ್ವಾಸನೆ ಅವರಿಂದ ಬಂದಿತು. 10-30ಕ್ಕೆ, 11ಕ್ಕೆ ಹೀಗೆ ಅನೇಕ ಸಲ ಕಮೀಷನರನ್ನು ಸಂಪರ್ಕಿಸಲಾಯಿತು. ಆಶ್ವಾಸನೆ, ಅನುಕಂಪದ ವಿನಹ ಅವರಿಂದ ರಕ್ಷಣೆ ದೊರೆಯಲಿಲ್ಲ. 11-30ರ ನಂತರ ಐಜಿಪಿ ಯವರಿಗೆ ದೂರು ಕೊಡಲಾಯಿತು. ಅವರು ಗರುಡಾಚಾರರ (ಕಮೀಷನರ)ನ್ನು ಸಂಪರ್ಕಿಸಲು ತಿಳಿಸಿದರು. (ಇದು ರಾಜ್ಯದ ಕಾನೂನು ರಕ್ಷಣೆಯ ಹೊಣೆಹೊತ್ತ ಹಿರಿಯ ಅಧಿಕಾರಿಗಳ ಬೇಜವಾಬ್ದಾರಿ ನಡುವಳಿಕೆ); ಮತ್ತೆ ಕಮೀಷನರರಿಗೆ ಫೋನಮಾಡಿದಾಗ ಡಿ. ಸಿ. ಪಿ ಮತ್ತು ಎ. ಸಿ. ಪಿ. ಯವರನ್ನು ಕಳುಹಿಸುತ್ತೇನೆಂದು ತಿಳಿಸಿದರು. ಅವರು ತಿಳಿಸಿದ ಹಾಗೆ ಪೋಲೀಸ್ ಅಧಿಕಾರಿಗಳೇನೋ ಬಂದರೂ ಕೈ ಕಟ್ಟಿ ನಿಂತುಕೊಂಡರು ಮಾತ್ರ. ಈ ಗೂಂಡಾಗಳ ಕುಖ್ಯಾತ ಮುಖಂಡ ಬೀಗದ ಕೈಯನ್ನು ಜೇಬಿಗಿಟ್ಟುಕೊಂಡು ಎಲ್ಲಿಗೋ ಹೊರಟು ಹೋಗಿದ್ದ. ಕೊನೆಯ ಪ್ರಯತ್ನವೆಂದು ರಾಜ್ಯಪಾಲರಿಗೆ, ನಗರದಲ್ಲಿ ಲಭ್ಯವಾಗಿದ್ದ ಕಾರ್ಮಿಕ ಸಚಿವ ಇಬ್ರಾಹಿಂರವರಿಗೆ ದೂರು ಸಲ್ಲಿಸಿದರೂ ಪರಿಣಾಮ ಮಾತ್ರ ಶೂನ್ಯ. ಬೆಳಗ್ಗೆ 7-30ಕ್ಕೆ ರಾಜ್ಯಪಾಲರಿಂದ (ಅದೂ ಕೇಂದ್ರ ಮಂತ್ರಿ ಜಾಫರ್ ಷರೀಫ್ ರಾಜ್ಯಪಾಲರಲ್ಲಿ ಹೋಗಿ ಒತ್ತಾಯಿಸಿದ ನಂತರ) ಪ್ರದರ್ಶನಕಾರರನ್ನು ಹೊರಗೆ ಹಾಕಿ ಬೀಗ ತೆಗೆಸಲು ಆದೇಶ ಬಂದಿತಾದರೂ 8-30ಕ್ಕೆ ಬೀಗ ತೆಗೆದು ದಿಗ್ಬಂಧನದಲ್ಲಿದ್ದ ನೌಕರರನ್ನು ಹೊರಬಿಡಲಾಯಿತು.

ಮಾರ್ಕ್ಸ್‌ವಾದಿ ಪಕ್ಷದ ಪ್ರತಿಭಟನಾ ಪ್ರದರ್ಶನ :

ಪಕ್ಷದ ಆಫೀಸಿಗೆ, ಕಾಂಗ್ರೆಸ್ ಗೂಂಡಾದಾಳಿಯ ಸುದ್ದಿ ಬಂದ ತಕ್ಷಣ ಸ್ಥಳದಲ್ಲಿದ್ದ ಕಾಮ್ರೇಡುಗಳು ಕಾರ್ಯಪ್ರವೃತ್ತರಾಗಿ ಪಕ್ಷದ ಕಾರ್ಯಕರ್ತರುಗಳನ್ನು ಸಂಪರ್ಕಿಸಿ ಸಾಯಂಕಾಲ 5 ಘಂಟೆಗೆ ನಗರದ ಮೈಸೂರ್ ಬ್ಯಾಂಕ್ ವೃತ್ತದ ಬಳಿಯಿಂದ ಮೆರವಣಿಗೆ ಹೊರಡಿಸಲು ಏರ್ಪಾಡು ಮಾಡಿದರು. "ಪತ್ರಿಕಾ ಕಾರ್ಯಾಲಯದ ಮೇಲೆ ಕಾಂಗ್ರೆಸ್ ಗೂಂಡಾದಾಳಿಗೆ ಧಿಕ್ಕಾರ", "ಪತ್ರಿಕಾ ಸ್ವಾತಂತ್ರ್ಯ ವಿರೋಧಿ ಗುಂಡೂರಾವ್‌ಗೆ ಧಿಕ್ಕಾರ" ಇತ್ಯಾದಿ ಬರಹಗಳುಳ್ಳ ಫಲಕಗಳನ್ನು, ಕೆಂಬಾವುಟಗಳನ್ನು ಹಿಡಿದು ಪಕ್ಷದ ಸದಸ್ಯರು, ಹಿತೈಷಿಗಳ ಮೆರವಣಿಗೆ ಸರಿಯಾಗಿ 5 ಘಂಟೆಗೆ ಪ್ರಾರಂಭವಾಯಿತು. ಕಾಂಗ್ರೆಸ್ ಗೂಂಡಾಗಳ ಹೇಯ ಕೃತ್ಯದ ವಿರುದ್ಧ ಆಕ್ರೋಷದ ಘೋಷಣೆಗಳೊಂದಿಗೆ ಸಾಗಿದ ಈ ಮೆರವಣಿಗೆಯನ್ನು ದಾರಿಯುಲ್ಲಿದ್ದ ಅನೇಕ ನಾಗರಿಕರು ಮೆಚ್ಚುಗೆಗಣ್ಣುಗಳಿಂದ ವೀಕ್ಷಿಸುತ್ತಿದ್ದರು. ನಂತರ ನೇರವಾಗಿ ಪ್ರಜಾವಾಣಿ-ಡೆಕ್ಕನ ಹೆರಾಲ್ಡ ಕಾರ್ಯಾಲಯಕ್ಕೆ ಹೋದಿ ಅಲ್ಲಿಯ ನೌಕರ ಬಾಂಧವರಿಗೆ ಪಕ್ಷದ ಪರವಾಗಿ ಬೆಂಬಲ ಸೂಚಿಸಲಾಯಿತು. ಪತ್ರಿಕಾ ಸ್ವಾತಂತ್ರ್ಯದ ಮೇಲಣ ದಾಳಿಯನ್ನು ಖಂಡಿಸಿ, ಪತ್ರಿಕಾ ನೌಕರರಿಗೆ ಬೆಂಬಲಕೊಡುವ ಅಂಶಗಳನ್ನೊಳಗೊಂಡ ಪತ್ರವನ್ನು ಪತ್ರಿಕೆಯ ಸಂಪಾದಕರು ಮತ್ತು ಸಿಬ್ಬಂದಿ ಪರವಾಗಿ ಶ್ರೀ ಮೈಸೂರು ಮಠ ಸ್ವೀಕರಿಸಿದರು. ಕಾಂ. ನಾಯರ್ ಪ್ರದರ್ಶನಕಾರರನ್ನು ಮತ್ತು ಪತ್ರಿಕಾ ಸಿಬ್ಬಂದಿಯವರನ್ನು ಉದ್ದೇಶಿಸಿ ಮಾತನಾಡಿದರು. ಶ್ರೀ ಮೈಸೂರ್ ಮಠ ಅವರು ನಿನ್ನೆ ನಡೆದ ಘಟನೆಯ ಪೂರ್ತಿ ವಿವರಣೆ ಕೊಟ್ಟು, ತಮಗೆ ತೋರಿದ ಬೆಂಬಲಕ್ಕಾಗಿ ಮಾರ್ಕ್ಸ್‌ವಾದಿ ಪಕ್ಷವನ್ನು ಅಭಿನಂದಿಸಿದರು. ನಂತರ ಮೆರವಣಿಗೆ ಶಿವಾಜಿನಗರ ಮುಖಾಂತರ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ಕನ್ನಡ ಪ್ರಭ ಕಾರ್ಯಾಲಯಗಳಿಗೆ ನಡೆಯಿತು, ಪಕ್ಷದ ಕಾರ್ಯಕರ್ತರು, ಮೆರವಣಿಗೆ ಏಕೆಂದು ಪ್ರಶ್ನಿಸುತ್ತಿದ್ದ ನಾಗರಿಕರಿಗೆ ವಿವರಣೆ ಕೊಡುತ್ತಾ ನಡೆದಿದ್ದರು.

ಮೆರವಣಿಗೆ ಕಾರ್ಯಾಲಯದ ಎದುರು ಬಂದಾಗ ಪ್ರದರ್ಶನಕಾರರನ್ನು ಸ್ವತಃ ಕನ್ನಡಪ್ರಭ ಸಂಪಾದಕ ಶ್ರೀ ಖಾದ್ರಿಯವರೇ ಎದುರುಗೊಂಡರು. ಘೋಷಣೆಗಳೊಂದಿಗೆ ಪ್ರವೇಶಿಸಿದ ಮೆರವಣಿಗೆಯನ್ನು ಕಂಡು ಎಕ್ಸ್‌ಪ್ರೆಸ್ ಪತ್ರಿಕಾ ಬಳಗದ ಸಿಬ್ಬಂದಿ ಉತ್ಸಾಹಿತರಾದಂತೆ ಕಂಡು ಬಂದಿತು.

ಬೆಂಬಲ ಸೂಚಿಸುವ ಪತ್ರವನ್ನು ಶ್ರೀ ಶಾಮಣ್ಣನವರಿಗೆ ನೀಡುತ್ತಾ ಕಾಂ. ನಾಯರ್ ನೆರೆದಿದ್ದ ಜನರನ್ನು ಉದ್ದೇಶಿಸಿ ಮಾತನಾಡುತ್ತಾ ಹಲ್ಲೆಯನ್ನು ಖಂಡಿಸಿದರು. ಶ್ರೀ ಖಾದ್ರಿಯವರು ಆದರ-ಅಭಿಮಾನಗಳಿಂದ ಪ್ರದರ್ಶನಕಾರರನ್ನು ಸ್ವಾಗತಿಸುತ್ತಾ "ನಿನ್ನೆ ನಡೆದ ಹಲ್ಲೆ ಮುಂದೆ ಬರಲಿರುವ ಅನಾಹುತದ ಮುನ್ಸೂಚನೆ ಎಂದರು. ಮುಂದುವರಿದು "ಈ ಕೃತ್ಯ ಒಬ್ಬ ವ್ಯಕ್ತಿಯ ವಿರುದ್ಧ ನಡೆದದ್ದಲ್ಲ. ನಡೆದದ್ದು ಪತ್ರಿಕಾ ಸ್ವಾತಂತ್ರ್ಯದ ವಿರುದ್ಧ. ಈ ರೀತಿಯ ದಾಳಿಗಳಿಂದ ಪತ್ರಿಕೆಗಳ ಬಾಯಿಮುಚ್ಚಲು ಖಂಡಿತ ಸಾಧ್ಯವಿಲ್ಲ. ನಿಮ್ಮೆಲ್ಲರ ಬೆಂಬಲದಿಂದ ಪತ್ರಿಕಾ ಸ್ವಾತಂತ್ರ್ಯವನ್ನು ಖಂಡಿತವಾಗಿ ಎತ್ತಿ ಹಿಡಿಯುತ್ತೇವೆ" ಎಂದು ಆಶ್ವಾಸನೆ ನೀಡಿದರು.

ಶಾಮಣ್ಣನವರಿಂದ ಬೀಳ್ಕೊಂಡ ನಂತರ ಪಕ್ಕದಲ್ಲಿಯೇ ಇದ್ದ ಪೋಲೀಸ್ ಕಮೀಷನರ ಆಫೀಸಿಗೆ ತೆರಳಿ ರಕ್ಷಣೆ ಕೊಡದ ಪೋಲೀಸ್ ಇಲಾಖೆಯ ವಿರುದ್ಧ ಆಕ್ರೋಷ ವ್ಯಕ್ತಪಡಿಸಲಾಯಿತು. "ಪೋಲೀಸ ಪಾಳೆಯಗಾರ ಗರುಡಾಚಾರರಿಗೆ ಧಿಕ್ಕಾರ", "ಮೂಕ ಪ್ರೇಕ್ಷಕರಂತೆ ವರ್ತಿಸಿದ ಪೋಲೀಸ ಅಧಿಕಾರಿಗಳಿಗೆ ಧಿಕ್ಕಾರ" ಎಂದು ಘೋಷಿಸುತ್ತಾ, ಕಮೀಷನರ ಆಫೀಸ ಎದುರೇ ಪ್ರದರ್ಶನಕಾರರು ಕುಳಿತುಕೊಂಡರು. ಸ್ವಲ್ಪ ಹೊತ್ತಿನ ನಂತರ ಕಾಂ. ನಾಯರ್ ನೇತೃತ್ವದ ನಿಯೋಗವೊಂದು ಕಮೀಷನರರನ್ನು ಭೇಟಿಯಾಗಿ ಅವರ (ಕಮೀಷನರ) ನಿಷ್ಕ್ರಿಯತೆಯನ್ನು ಖಂಡಿಸುವ ಪತ್ರವನ್ನು ಅವರಿಗೆ ಕೊಡಲಾಯಿತು. ಆಳುವ ವರ್ಗದ ಕೈಗೊಂಬೆಯಾಗದಿರುವಂತೆ ಅವರಿಗೆ ಎಚ್ಚರಿಕೆ ನೀಡಲಾಯಿತು. ಮೌನದಿಂದ ಕುಳಿತಿದ್ದ ಕಮೀಷನರ ತಮ್ಮ ವರ್ತನೆಯನ್ನು ಏನೇನೋ ಸಬೂಬು ಹೇಳಿ ತಮ್ಮ ವರ್ತನೆಯನ್ನು ಸಮರ್ಥಿಸಿಕೊಂಡರು. ಅವರ ವಿವರಣೆಯನ್ನು ಒಪ್ಪದ ನಿಯೋಗ ಹೊರಗೆ ಬಂದಿತು. ನಂತರ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ವಿ ಜೆ ಕೆ. ನಾಯರ್ ಪಕ್ಷದ ಸಂಗಾತಿಗಳನ್ನು, ಹಿತೈಷಿಗಳನ್ನು ಉದ್ದೇಶಿಸಿ ಪತ್ರಿಕಾ ಕಾರ್ಯಾಲಯದ ಮೇಲಿನ ಹಲ್ಲೆಯನ್ನು ಪ್ರಸ್ತಾಪಿಸಿ, "ಪ್ರಜಾಪ್ರಭುತ್ವ ಹಕ್ಕುಗಳನ್ನು ರಕ್ಷಿಸುವ ಹೊಣೆ ಕಾರ್ಮಿಕ ವರ್ಗದ ಮೇಲಿದೆ" ಎಂದು ತಿಳಿಸಿದರು. "ರಾಷ್ಟ್ರೀಯ ಭದ್ರತಾ ಕಾಯ್ದೆ"ಯನ್ನು ಜಾರಿಗೆ ತಂದಿರುವುದನ್ನು ಪ್ರಸ್ತಾಪಿಸುತ್ತಾ "ಇಂದಿರಾ ಸರಕಾರದ ಈ ಕ್ರಮ ತುರ್ತುಪರಿಸ್ಥಿತಿಯ ಪುನರಾಗಮನ, ವಿರೋಧಿ ಪಕ್ಷಗಳನ್ನು ಸದೆಬಡಿಯುವ, ಜನತಂತ್ರವನ್ನು ಹತ್ತಿಕ್ಕಲೆತ್ನಿಸುವ ಸರಕಾರದ ಕ್ರಮಗಳ ವಿರುದ್ಧ ಹೋರಾಡಲು ಸಿದ್ಧವಾಗಿರುವಂತೆ" ಕರೆ ಕೊಟ್ಟರು.

ಪಕ್ಷದ ಕರೆಯ ಮೇರೆಗೆ ಸ್ವಲ್ಪವೇ ಸಮಯದಲ್ಲಿ ಓಗೊಟ್ಟು, ಪ್ರತಿಭಟನಾ ಪ್ರದರ್ಶನಕ್ಕೆ ಸಹಕರಿಸಿದ ಎಲ್ಲರಿಗೂ ಪಕ್ಷದ ಪರವಾಗಿ ಕೃತಜ್ಞತೆಯನ್ನು ಅರ್ಪಿಸಿದ ನಂತರ ಮೆರವಣಿಗೆ ಮುಕ್ತಾಯವಾಯಿತು.

ಪತ್ರಿಕಾಕರ್ತರ ಬೆಂಬಲಾರ್ಥವಾಗಿ ಕೊಟ್ಟ ಪತ್ರದ ಪೂರ್ತಿ ಪಾಠ :

"ಆಡಳಿತ ಪಕ್ಷದ ಗೂಂಡಾಪಡೆ, ನಿಮ್ಮ ಪತ್ರಿಕಾ ಕಾರ್ಯಾಲಯವನ್ನು ಮುತ್ತಿಗೆ ಹಾಕಿ, ಪತ್ರಿಕಾ ಕರ್ತರನ್ನು, ಸಿಬ್ಬಂದಿಯವರನ್ನು ದಿಗ್ಬಂಧನಗೊಳಿಸಿದ್ದನ್ನು, ಗೇಟನ್ನು ಬಲವಂತವಾಗಿ ಮುಚ್ಚಿ ಪತ್ರಿಕೆಗಳು ಹೊರಗೆ ಹೋಗದಂತೆ ತಡೆದ (ಪೋಲೀಸರ ಎದುರಲ್ಲೇ) ಘಟನೆಯನ್ನು ನಾವು ಉಗ್ರವಾಗಿ ಖಂಡಿಸುತ್ತೇವೆ.

"ಕಾರ್ಮಿಕ ವರ್ಗದ ಮುಂಚೂಣಿಯಾದ, ಆಡಳಿತ ಪಕ್ಷದ ಆಳುವ ವೈಖರಿಯ ವಿರುದ್ಧ ದಿನನಿತ್ಯ ಹೋರಾಡುತ್ತಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ಹೇಯವರ್ತನೆಯನ್ನು ಪ್ರತಿಭಟಿಸುತ್ತದೆ, ಕಾರ್ಯಾಲಯದ ಮೇಲೆ ನಡೆದ ಹಲ್ಲೆಯನ್ನು ಪ್ರತಿಭಟಿಸಿ ನಾವು ಈ ಪ್ರತಿಭಟನಾ ಪ್ರದರ್ಶನವನ್ನು ಪಕ್ಷದ ಪರವಾಗಿ ಏರ್ಪಡಿಸಿ ನಿಮ್ಮ ಪತ್ರಿಕೆಗಳಿಗೆ ಸೌಹಾರ್ದತಾ ಬೆಂಬಲವನ್ನು ಸೂಚಿಸುತ್ತಿದ್ದೇವೆ.

(ಕಡೇ ಪುಟ ನೋಡಿ)

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಅದರ ಸೌಹಾರ್ದ ಸಂಬಂಧಗಳು

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಇತರ ಸೋದರ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳೊಂದಿಗೆ ಹೊಂದಿರುವ ಸಂಬಂಧಗಳು ಇತ್ತೀಚೆಗೆ ಪತ್ರಿಕೆಗಳಲ್ಲಿ ಚರ್ಚೆಯ ವಿಚಾರವಾಗಿವೆ. ಸಿ. ಪಿ. ಐ.(ಎಂ) ಚೀನದ ಕಮ್ಯುನಿಸ್ಟ್ ಪಕ್ಷದೊಡನೆ ಸೋದರ ಸಂಬಂಧಗಳನ್ನು ಬೆಳೆಸಿಕೊಳ್ಳಲು ಯತ್ನಿಸುತ್ತಿದೆ ಎಂದು ಕೆಲವರು ಹೇಳುತ್ತಿದ್ದಾರೆ. "ಮಾಸ್ಕೋದ ಕೃಪೆಯನ್ನು ಪಡೆಯಲು ಸಿ.ಪಿ.ಐ.(ಎಂ) ಕೂಡ ಆಸೆಯನ್ನು ಬೆಳೆಸಿಕೊಂಡಂತೆ ಕಾಣುತ್ತದೆ" ಎಂದೊಬ್ಬ ಪತ್ರಕರ್ತರು ಬರೆದಿದ್ದಾರೆ.

ಪಕ್ಷದ ಕೇಂದ್ರ ಸಮಿತಿ ಸದಸ್ಯರಾದ ಕಾಂ. ಸರೋಜ್ ಮುಖರ್ಜಿಯವರು 1980ರ ಮಾರ್ಚ್‌ನಲ್ಲಿ ಚೀನಕ್ಕೆ ಭೇಟಿ ನೀಡಿದ ನಂತರ ಮತ್ತು ಕಾಂ. ಜ್ಯೋತಿಬಸು 1980ರ ಜೂನ್‌ನಲ್ಲಿ ಮಾಸ್ಕೋ ಒಲಿಂಪಿಕ್ಸ್‌ಗೆ ಹೋಗಿ ಬಂದನಂತರ ಇಂಥ ಮಾತುಗಳು ಈಗ ತುಂಬ ಹೆಚ್ಚಾಗಿವೆ. ಸಿ.ಪಿ.ಐ.(ಎಂ) ಇತರ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳೊಡನೆ ಸೋದರ ಸಂಬಂಧಗಳನ್ನು ಬೆಳೆಸಿಕೊಳ್ಳುವ ಪ್ರಶ್ನೆಯು ವ್ಯಾವಹಾರಿಕತೆ ಮತ್ತು ಸಮಯಸಾಧಕತೆಯನ್ನು ಅವಲಂಬಿಸಿ ಅದರ ಏಳನೇ ಅಧಿವೇಶನದಲ್ಲಿ ಸ್ವೀಕೃತವಾಯಿತು.

ಪಕ್ಷದ ನಮ್ಮ ಏಳನೆಯ ಅಧಿವೇಶನದ ಕೂಡಲೇ ನಾವು ಪಕ್ಷ-ಪಕ್ಷಗಳ ಸೋದರ ಸಂಬಂಧಗಳನ್ನು ಬೆಳೆಸುವುದಕ್ಕಾಗಿ ಜಗತ್ತಿನ ವಿವಿಧ ಕಮ್ಯುನಿಸ್ಟ್ ಪಕ್ಷಗಳಿಗೆ ದಾಖಲೆಗಳನ್ನು ಕಳಿಸಿದೆವು. ಇದೂ ಚರಿತ್ರೆಯಲ್ಲಿ ಒಂದು ಸಂಗತಿಯಾಗಿದೆ.

ಸ್ವಲ್ಪ ಕಾಲಾನಂತರ ಕ್ಯೂಬ, ಚೀನ, ವಿಯೆಟ್‌ನಾಮ್, ಕೊರಿಯಾ ಮತ್ತು ರುಮೇನಿಯಾ ದೇಶಗಳ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ನಮ್ಮ ಮನವಿಗೆ ಉತ್ತರ ಕಳಿಸಿದವು. ಆದರೆ 1967ರಲ್ಲಿ ಚೀನದ ಕಮ್ಯುನಿಸ್ಟ್ ಪಕ್ಷ ಸಿ ಪಿ ಐ (ಎಂ) ನೊಂದಿರಿದ್ದ ಸಂಬಂಧವನ್ನು ಏಕಾಏಕಿ ಕಡಿದುಕೊಂಡಿತು.

ಸೋವಿಯೆತ್ ದೇಶದ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಸೋದರ ಪಕ್ಷಗಳು ನಮ್ಮ ಮನವಿಗೆ ಉತ್ತರಿಸದೆ, ಸಿ ಪಿ ಐ.ನೊಂದಿಗಿದ್ದ ಅವುಗಳ ಸೋದರ ಸಂಬಂಧವನ್ನು ಮುಂದುವರಿಸಿದವು. ಆದರೂ ಕೂಡ, ಜಗತ್ತಿನ ಎಲ್ಲ ಕಮ್ಯುನಿಸ್ಟ್ ಮತ್ತು ದಲ್ಲಿ ಗಮನಿಸುವುದು ತುಂಬ ಮುಖ್ಯವಾದದ್ದು, ನಮ್ಮ ಪಕ್ಷ ಇದಕ್ಕೆ ಅಪವಾದವಲ್ಲ, ಆಗಿರಲು ಸಾಧ್ಯವಿಲ್ಲ.

1848ಕ್ಕೆ ಹೋಲಿಸಿದರೆ ನಾವು ಜೀವಿಸುತ್ತಿರುವ ಈ 1980ನೇ ವರ್ಷ ಪೂರ್ಣವಾದ ಹೊಸಯುಗ. ಆ ವರ್ಷದಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರು ಕಮ್ಯುನಿಸ್ಟ್ ಮ್ಯಾನಿಫೆಸ್ಟೋವನ್ನು ಪ್ರಕಟಿಸಿದರು. ಅದರಲ್ಲಿ ಅವರು "ನಮ್ಮ ಯುಗ"ವನ್ನು "ಬೂರ್ಜ್ವಾ ಯುಗ" ಎಂದು ವರ್ಣಿಸಿ

ಎಂ. ಬಸವಪುನ್ನಯ್ಯ

"ಕಾರ್ಮಿಕರು ಕಳೆದುಕೊಳ್ಳುವುದು ಬಂಧನದ ಸರಪಳಿಗಳನ್ನೇ ಹೊರತು ಬೇರೆಯದನ್ನಲ್ಲ. ಗೆಲ್ಲಲು ಅವರಿಗೆ ಇಡೀ ಜಗತ್ತೇ ಮುಂದಿದೆ" ಎಂದು ವಿಶ್ವದ ಕಾರ್ಮಿಕವರ್ಗವನ್ನು ಹುರಿದುಂಬಿಸಿದ್ದರು. ಕಳೆದ 132 ವರ್ಷಗಳಲ್ಲಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ಅಗಾಧ ಸಾಧನೆಗಳನ್ನು ಗಳಿಸಿ ಸಂಪೂರ್ಣವಾಗಿ ಹೊಸ ಯುಗದಲ್ಲಿ ಕಾಲಿರಿಸಿದೆ.

ಎರಡು ವಿಶ್ವ ಕಮ್ಯುನಿಸ್ಟ್ ಸಭೆಗಳು 1957ರ ಘೋಷಣೆ ಮತ್ತು ವಾದಿ ಮತ್ತು ಕಮ್ಯುನಿಸ್ಟ್ ಶಕ್ತಿಗಳಲ್ಲಿ ಅಗಾಧ ಬೆಳವಣಿಗೆ ಆಗಿದೆ. ಚಳುವಳಿ ಎದುರಿಸಿದ ಸಮಸ್ಯೆಗಳಿಂದಲೆ ವಿಶ್ವದ ಕಮ್ಯುನಿಸ್ಟ್ ಐಕ್ಯತೆಯನ್ನು ಮತ್ತೆ ಬೆಳೆಸುವುದು ಮತ್ತು ವಿಶ್ವ ಸಮಾಜವಾದಿ ಕ್ರಾಂತಿಯ ಚಾರಿತ್ರಿಕ ಗುರಿಯನ್ನು ಒಗ್ಗಟ್ಟಿನಿಂದ ಯಶಸ್ವಿಯಾಗಿ ನಡೆಸುವುದು.

ಆಳುವ ಕಮ್ಯುನಿಸ್ಟ್ ಪಕ್ಷಗಳನ್ನು ಬಿಟ್ಟರೆ ಈ ದಿನ ಒಟ್ಟು 45 ಮಿಲಿಯನ್ ಸದಸ್ಯತ್ವವುಳ್ಳ 90 ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳು ಅಸ್ತಿತ್ವದಲ್ಲಿವೆ. ಸೋವಿಯೆತ್ ದೇಶವೊಂದರಲ್ಲೇ 17 ಮಿಲಿಯನ್ ಕಮ್ಯುನಿಸ್ಟರಿದ್ದಾರೆ. ಚೀನದಲ್ಲಿ 38 ಮಿಲಿಯನ್ ಸದಸ್ಯರಿದ್ದಾರೆ. ಇದಲ್ಲದೆ ಇತರ ಸಮಾಜವಾದಿ ದೇಶಗಳಲ್ಲಿ ಇನ್ನೂ ಅನೇಕ ಮಿಲಿಯನ್ ಕಮ್ಯುನಿಸ್ಟರಿದ್ದಾರೆ.

ಈ ದಿನ 1500 ಮಿಲಿಯನ್ ಒಟ್ಟು ಜನಸಂಖ್ಯೆಯುಳ್ಳ 15 ಸಮಾಜವಾದಿ ದೇಶಗಳಿವೆ. ಅವು ವಿಶ್ವದ ಜನಸಂಖ್ಯೆಯ ಮೂರರೊಳ್ಳೊಂದು ಜನಸಂಖ್ಯೆ ಹೊಂದಿವೆ. ಮಾರ್ಕ್ಸ್, ಎಂಗೆಲ್ಸ್ ಮತ್ತು ಆ ಪೀಳಿಗೆಯ ಇತರ ಅನೇಕ ಮಾರ್ಕ್ಸ್‌ವಾದಿಗಳ ನಿರೀಕ್ಷೆಗೆ ಹಿಡಿತದಲ್ಲೇ ಉಳಿದು, ಸಮಾಜವಾದಿ ದೇಶಗಳ ಮೇಲೆ ಯುದ್ಧ ಸಾರುತ್ತಿವೆ.

ಅಸಮಾನ ಬೆಳವಣಿಗೆ :

ಆರ್ಥಿಕವಾಗಿ ಹಿಂದುಳಿದಿದ್ದ ರಷ್ಯಾದಿಂದ ಆರಂಭಿಸಿ, 1910ರ ಜಾರ್ ಶಾಹಿ ರಷ್ಯಕ್ಕಿಂತಲೂ ಹಿಂದುಳಿದಿದ್ದ ದೇಶಗಳಲ್ಲಿ ಸಮಾಜವಾದಿ ಕ್ರಾಂತಿ ಯಶಸ್ವಿಯಾಗಿದೆ. ಬೆಳೆದ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ದೇಶಗಳ ಜೊತೆ ದ್ವೇಷಪೂರ್ಣ ವಿರೋಧ ಮತ್ತು ನಿತ್ಯರು ಹೋರಾಟಗಳ ಮೂಲಕ ಹಿಂದುಳಿದ ದೇಶಗಳಲ್ಲಿ ಸಮಾಜವಾದವನ್ನು ಕಟ್ಟುವ ಈ ಹೊಸ ಅಂಶವು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಮುನ್ನಡೆಯಲ್ಲಿ ಹೊಸ ಸಂಕೀರ್ಣ ಸಮಸ್ಯೆಗಳು ಮತ್ತು ಅಪಾರ ಕಷ್ಟಗಳನ್ನು ತಂದೊಡ್ಡಿದೆ.

ಇಂದಿನ ವಿವಿಧ ಸಮಾಜವಾದಿ ದೇಶಗಳ ಸಾಮಾಜವಾದಿ ದೇಶಗಳ ಸಾಮಾಜಿಕ ಆರ್ಥಿಕ ಬೆಳವಣಿಗೆಯಲ್ಲಿ ವಿಪರೀತ ವ್ಯತ್ಯಾಸಗಳಿವೆ. ಕೈಗಾರಿಕೆ, ತಾಂತ್ರಿಕತೆ, ಆರ್ಥಿಕತೆ, ಮಿಲಿಟರಿ ಮತ್ತು ಸಂಸ್ಕೃತಿಯ ಹಂತಗಳಲ್ಲಿ ಒಂದೊಂದರ ನಡುವೆಯೂ ಭಿನ್ನತೆಕೊಂಡಿದೆ ಎಂದು ಈ ಬೂರ್ಜ್ವಾ ವಿಮರ್ಶಕರು ಮತ್ತು ಟೀಕಾಕಾರರು ಬರೆಯುತ್ತಾರೆ. ಈ ವಿಚಾರದ ಬಗ್ಗೆ ನಮ್ಮ ನೀತಿ ಏನು ಎನ್ನುವುದನ್ನು ವಿವರಿಸಿ, ಆ ಬಗ್ಗೆ ಏನಾದರೂ ತಪ್ಪು ತಿಳಿವಳಿಕೆಗಳಿದ್ದರೆ ಅದನ್ನು ನಿವಾರಿಸುವುದು ಒಳ್ಳೆಯದು.

ಒಡಕಿನ ನಂತರ :

ಹಿಂದೊಮ್ಮೆ ಒಗ್ಗಟ್ಟಿನಿಂದಿದ್ದ ಭಾರತ ಕಮ್ಯುನಿಸ್ಟ್ ಪಕ್ಷದಲ್ಲಿ ಇದ್ದ ತೀವ್ರವಾದ ರಾಜಕೀಯ ಮತ್ತು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದ 1963-64ರಲ್ಲಿ ನೇರವಾದ ಒಡಕು ಉಂಟಾಯಿತು ಎನ್ನುವುದು ಇತಿಹಾಸದ ಒಂದು ಅಂಶ. ಸಿ.ಪಿ.ಐ. ಮತ್ತು ಅದರ ನೀತಿಗಳಿಂದ ದೂರವಾಗಿದ್ದ ನಾವು ಕೆಲವರು 1964ರ ಅಕ್ಟೋಬರ್-ನವೆಂಬರ್‌ನಲ್ಲಿ ನಮ್ಮದೆ ಆದ ಏಳನೇ ಪಕ್ಷದ ಅಧಿವೇಶನವನ್ನು ಕರೆದು ಸಿ ಪಿ ಐ. ಮತ್ತು ಅದರ ಕಾರ್ಯಕ್ರಮ, ನೀತಿಗಳಿಂದ ಸ್ಪಷ್ಟವಾದ ಭಿನ್ನವಾಗಿದ್ದ ಒಂದು ಕಾರ್ಯಕ್ರಮ ಮತ್ತು ರಾಜಕೀಯ ನೀತಿಯನ್ನು ಒಪ್ಪಿಕೊಂಡಿದ್ದೆವು. ಸಿ. ಪಿ. ಐ. ಯ ಕಾರ್ಯಕ್ರಮ ಮತ್ತು ರಾಜಕೀಯ ನೀತಿ 1964ರ ಡಿಸೆಂಬರ್‌ನಲ್ಲಿ ನಡೆದ ಕಾರ್ಮಿಕ ಪಕ್ಷಗಳ ಜೊತೆ ಇರಬೇಕಾದ ಸೋದರ ಸಂಬಂಧಗಳ ಬಗ್ಗೆ ಇರುವ ತನ್ನ ಮೂಲಭೂತ ದೃಷ್ಟಿಕೋನವನ್ನು ಸಿ. ಪಿ. ಐ. (ಎಂ)ನ ಕೇಂದ್ರಸಮಿತಿ ಇನ್ನೂ ಬಿಟ್ಟುಕೊಟ್ಟಿಲ್ಲ, ತನ್ನೊಡನೆ ಸಂಬಂಧ ಬೆಳೆಸಿಕೊಳ್ಳಲು ಇಚ್ಛಿಸುವ ಯಾವುದೇ ಕಮ್ಯುನಿಸ್ಟ್ ಪಕ್ಷದೊಡನೆಯೂ ಅದು ಚೆನ್ನಾಗಿ ವರ್ತಿಸಿದೆ. ಪ್ರತ್ಯೇಕ ಹೊಂದಿದ ಮೇಲಿನ 16 ವರ್ಷಗಳಲ್ಲಿ ಸಿ. ಪಿ. ಐ. (ಎಂ) ಅನುಸರಿಸಿದ ನೀತಿ ಇದು. ಆದರಿಂದ ಎಂದೂ ಬೇರೆಯಾಗಿಲ್ಲ.

ಪೂರ್ಣವಾಗಿ ಹೊಸಯುಗ

ಆದರೆ, ಪ್ರತಿಯೊಂದು ಕಮ್ಯುನಿಸ್ಟ್ ಮತ್ತು ಇಡೀ ಕಮ್ಯುನಿಸ್ಟ್ ವಿಶ್ವಚಳುವಳಿಯು ಭಿನ್ನಾಭಿಪ್ರಾಯಗಳು, ವಿಭಜನೆಗಳು, ಒಡಕುಗಳು ಇವೆಲ್ಲವನ್ನೂ ಎರಡು ದಶಕಗಳಿಂದ ಅನುಭವಿಸುತ್ತಿದ್ದು, ಈಗ ಅವು ಬೆಳವಣಿಗೆಗಳ ಕ್ರಮವನ್ನು ಪ್ರಶ್ನಿಸುತ್ತಿವೆ, ಹೊಸದಾಗಿ ಉದ್ಭವಿಸುತ್ತಿರುವ ವರ್ಗ ವಾಸ್ತವತೆಗಳನ್ನು ಕಲಿತುಕೊಳ್ಳಲು, ಶಕ್ತಿಗಳ ಒಕ್ಕೂಟವನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಿವೆ ಎಂಬುದನ್ನು ಈ ಸಂದರ್ಭ 1960ರ ಹೇಳಿಕೆಗಳು ವಿವರಿಸುವ ಹಾಗೆ ಈ ಸದ್ಯದ ಯುಗವು, ವಿಶ್ವ ಸಮಾಜವಾದಿ ಕ್ರಾಂತಿಯ ವಿಜಯದ ಯುಗ. "ಮಹಾನ್ ಅಕ್ಟೋಬರ್ ಕ್ರಾಂತಿಯ ಪ್ರೇರೇಪಣೆಯಿಂದ, ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಪರಿವರ್ತನೆ ಹೊಂದುವುದೇ ತಿರುಳಾಗಿರುವ ಈ ನಮ್ಮ ಕಾಲವು, ಎರಡು ಸಾಮಾಜಿಕ ವ್ಯವಸ್ಥೆಗಳ ನಡುವಿನ ಹೋರಾಟದ ಕಾಲ, ಸಮಾಜವಾದಿ ಕ್ರಾಂತಿಗಳ, ರಾಷ್ಟ್ರೀಯ ವಿಮೋಚನಾ ಕ್ರಾಂತಿಗಳ ಕಾಲ, ಸಾಮ್ರಾಜ್ಯಶಾಹಿಯ ಕುಸಿತ ಕಾಲ, ವಸಾಹತು ವ್ಯವಸ್ಥೆಯ ವಿನಾಶದ ಕಾಲ, ಹೆಚ್ಚು ಹೆಚ್ಚು ಜನರು ಸಮಾಜವಾದಿ ಪಥಕ್ಕೆ ಪರಿವರ್ತನೆ ಹೊಂದುವ ಕಾಲ, ವಿಶ್ವದಾದ್ಯಂತ ಸಮಾಜವಾದ ಮತ್ತು ಸಮತಾವಾದಗಳು ಗೆಲ್ಲುವ ಕಾಲ"

ಅಗಾಧ ಬೆಳವಣಿಗೆ :

ವಿಶ್ವ ಚಳುವಳಿಯು ಕಷ್ಟಕರವಾದ ಮತ್ತು ಸಂಕೀರ್ಣವಾದ ಸಮಸ್ಯೆಗಳನ್ನು ಎದುರಿಸಬೇಕಾಗಿ ಬಂದರೂ ಸಹ, ಈ ಮೇಲಿನ ಘೋಷಣೆ ಮತ್ತು ಹೇಳಿಕೆಗಳು ಬಂದ ನಂತರದ 20 ವರ್ಷಗಳಲ್ಲಿ ವಿಶ್ವದ ಸಮಾಜ ವಿರೋಧವಾಗಿ, ಸಾಂಪ್ರದಾಯಿಕವಾಗಿ ಬೆಳೆದ ಪಶ್ಚಿಮ ಯೂರೋಪು ಮತ್ತು ಉತ್ತರ ಅಮೆರಿಕಾಗಳ ಕಾರ್ಮಿಕ ವರ್ಗವು, ಕಾರ್ಮಿಕ ಸಮಾಜವಾದಿ ಕ್ರಾಂತಿಯನ್ನು ಸಾಧಿಸುವುದರಲ್ಲಿ ಇದುವರೆಗೆ ಯಶಪಡೆದಿಲ್ಲ. ಈ ಬೆಳೆದ ಬಂಡವಾಳಶಾಹಿ ದೇಶಗಳ ಬಂಡವಾಳಶಾಹಿ ಚಿಪ್ಪು, ಒಡೆಯಲಿಕ್ಕಾಗದಷ್ಟು ಗಟ್ಟಿಯೆನಿಸಿ, ಇಲ್ಲಿನ ಬಂಡವಾಳಶಾಹಿ ವರ್ಗವು ಅದೇ ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರುವುದರಲ್ಲಿ ಯಶಸ್ವಿಯಾಯಿತು.

1882ರಲ್ಲಿ ಎಂಗೆಲ್ಸ್, ಕಾರ್ಲ್ ಕಾಟ್‌ಸ್ಕಿಗೆ ಬರೆದ ಪತ್ರದಲ್ಲಿ "ಒಮ್ಮೆ ಯೂರೋಪು ಗಮನಕ್ಕೆ ಪಾತ್ರವಾದರೆ, ಉತ್ತರ ಅಮೆರಿಕವು ಎಂಥ ಶಕ್ತಿ ಮತ್ತು ಉದಾಹರಣೆಯನ್ನು ಕೊಡುತ್ತದೆಂದರೆ, ಅರೆನಾಗರಿಕ ದೇಶಗಳು ತಮಗೆ ತಾವೇ ಈ ದಾರಿ ಹಿಡಿಯುತ್ತವೆ ಆರ್ಥಿಕ ಅಗತ್ಯಗಳು ಹೀಗೆ ಮಾಡಿಸುತ್ತವೆ" ಎಂದಿದ್ದರು. ಬೆಳೆದ ಬಂಡವಾಳಶಾಹಿ ದೇಶಗಳ ಈ "ಶಕ್ತಿ"ಯು ಸಮಾಜವಾದ ಮತ್ತು ಸಮತಾವಾದಗಳಲ್ಲಿ "ಗಮನಕ್ಕೆ ಪಾತ್ರ"ವಾದಿ ಹಿಂದುಳಿದ ಮತ್ತು "ಅರೆ ನಾಗರಿಕ ದೇಶ"ಗಳಿಗೆ ಬೇಕಾದ ಸಹಾಯ ಮತ್ತು ಪ್ರೇರೇಪಣೆ ನೀಡುವುದರ ಬದಲು, ಇನ್ನೂ ಬಂಡವಾಳಶಾಹಿಯ ಯಿದೆ. 63 ವರ್ಷಗಳ ಹಿಂದೆ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿ ಯಶಸ್ವಿಯಾದ ಸೋವಿಯೆತ್‌ದೇಶದಲ್ಲಿ ಅಗಾಧವಾದ ಸಮಾಜವಾದಿ ಶಕ್ತಿಯನ್ನು ರೂಪಿಸಲು, ಸಾಮ್ರಾಜ್ಯಶಾಹಿ ಬೃಹತ್ ಶಕ್ತಿಯಾದ ಅಮೆರಿಕದ ಆಕ್ರಮಣಶೀಲ ಯೋಜನೆಗಳನ್ನು ತಡೆಯಲು ಸಾಧ್ಯವಾಗಿದೆ. ಕಾರ್ಮಿಕವರ್ಗದ ನಾಯಕತ್ವದಲ್ಲಿ ರಾಷ್ಟ್ರೀಯ ವಿಮೋಚನೆಯನ್ನು ಸಾಧಿಸಿದ ವಿಯೆಟ್‌ನಾಮ್‌ನಲ್ಲಿ ಮೊದಲು ಫ್ರೆಂಚ್ ಸಾಮ್ರಾಜ್ಯಶಾಹಿಗಳ ನಂತರ ಅಮೆರಿಕದ ಸಾಮ್ರಾಜ್ಯಶಾಹಿಗಳ ಮಧ್ಯಪ್ರವೇಶದಿಂದ ಸಮಾಜವಾದವನ್ನು ಕಟ್ಟುವುದರಲ್ಲಿ ಅಡ್ಡಿ ತಡೆಗಳು ಬಂದವು. 1974-75ರ ಯುದ್ಧದಲ್ಲಷ್ಟೇ ಅಮೆರಿಕವನ್ನು ಸೋಲಿಸಲಾಯಿತು. ಹತ್ತಿಪ್ಪತ್ತು ವರ್ಷಗಳ ಹಿಂದೆಯೇ ತಮ್ಮ ಕ್ರಾಂತಿಗಳನ್ನು ಸಾಧಿಸುವುದರಲ್ಲಿ ಸಫಲವಾದ ಇತರ ಸಮಾಜವಾದಿ ದೇಶಗಳು ಕೆಲವು, ಇಂದಿಗೂ ಆರ್ಥಿಕವಾಗಿ ದುರ್ಬಲವಾಗಿ ಹಿಂದುಳಿದಿವೆ. ಬೆಳವಣಿಗೆಯ ಕೈಗಾರಿಕೆ ಮತ್ತು ತಾಂತ್ರಿಕ ಮಟ್ಟ, ಗಂಡಸರು ಮತ್ತು ಮಹಿಳೆಯರ ತಲಾವಾರು ಉತ್ಪಾದಕತೆ ಇವೆಲ್ಲ ಒಂದು ಸಮಾಜವಾದಿ ದೇಶಕ್ಕೂ ಇನ್ನೊಂದಕ್ಕೂ ಭಿನ್ನವಾಗಿದೆ. ನಿಸರ್ಗ ಸಂಪತ್ತು ಆ ನಿಸರ್ಗಸಂಪತ್ತಿನ ಅಗಾಧತೆ ಮತ್ತು

ಶ್ರೀಮಂತಿಕೆ, ಮಾನವಶಕ್ತಿ ಇವೆಲ್ಲ ವಿವಿಧ ಸಮಾಜವಾದಿ ದೇಶಗಳಲ್ಲಿ ವ್ಯತ್ಯಾಸ ಪಡೆದಿವೆ. ವಿವಿಧ ಸಮಾಜವಾದಿ ದೇಶಗಳಲ್ಲಿ ಅಭಿವೃದ್ಧಿಯ ಹಂತಗಳು ಅಸಮಾನವಾಗಿರುವುದರಿಂದ ಪರಸ್ಪರ ಆರ್ಥಿಕ, ವಾಣಿಜ್ಯ, ಸಹಾಯ ವ್ಯವಹಾರಗಳನ್ನು ನಡೆಸುವುದರಲ್ಲಿ ಅನೇಕ ಸಂಕೀರ್ಣ ಸಮಸ್ಯೆಗಳು ತಲೆದೋರಿವೆ. ಇವುಗಳನ್ನು ಕಾರ್ಮಿಕ ಅಂತರರಾಷ್ಟ್ರೀಯತೆಯ ಬೆಳಕಿನಲ್ಲಿ ಪರಿಹರಿಸಿಕೊಳ್ಳಬೇಕು.

ರಾಷ್ಟ್ರಮಟ್ಟದ ಸಮಾಜವಾದಿ ದೇಶಗಳನ್ನು ಕಟ್ಟುವಾಗ ದೊಡ್ಡ ರಾಷ್ಟ್ರದ ದುರಭಿಮಾನ, ರಾಷ್ಟ್ರೀಯ ಸಂಕುಚಿತಮನೋಭಾವ ಮುಂತಾದುವು ಉದ್ಭವಿಸುತ್ತವೆ. ಇದನ್ನೂ ಕೂಡ ಕಾರ್ಮಿಕ ಅಂತರರಾಷ್ಟ್ರೀಯತೆಯ ಉನ್ನತ ಮಟ್ಟದ ಪ್ರಜ್ಞೆಯ ಬೆಳಕಿನಲ್ಲಿ ಸಮಾಜವಾದಿದೇಶಗಳು ಚರ್ಚಿಸಿ ಪರಿಹರಿಸಿಕೊಳ್ಳಬೇಕು. ಕಮ್ಯುನಿಸ್ಟ್ ಪಕ್ಷಗಳಷ್ಟೇ ಅಲ್ಲ, ಈ ಸಮಾಜವಾದಿ ದೇಶಗಳ ಕಾರ್ಮಿಕರಿಗೆ ಕೂಡ ಮಾತು ಮತ್ತು ಕೃತಿಯಲ್ಲಿ ಕಾರ್ಮಿಕ ಅಂತರರಾಷ್ಟ್ರೀಯತೆಯ ಚೇತನದ ಶಿಕ್ಷಣ ಕೊಟ್ಟು ಅವರನ್ನು ಅದಕ್ಕೆ ಬದ್ಧರನ್ನಾಗಿ ಮಾಡಬೇಕು.

ವಿದೇಶಿ ನೀತಿಗಳು :

ತಮ್ಮ ದೇಶದಲ್ಲಿ ಸಮಾಜವಾದವನ್ನು ಕಟ್ಟಲು, ಎಲ್ಲ ದೇಶಗಳಲ್ಲಿ ಸಮಾಜವಾದವನ್ನು ಬೆಳೆಸಲು, ಸಮಾಜವಾದಿ ಶಿಬಿರದ, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಶಿಬಿರದ, ಹಿತಾಸಕ್ತಿಗಳನ್ನು ಗಮನದಲ್ಲಿರಿಸಿಕೊಂಡು ವಿವಿಧ ಸಮಾಜವಾದಿ ದೇಶಗಳು ತಮ್ಮ ತಮ್ಮ ವಿದೇಶಿ ನೀತಿಗಳನ್ನು ರೂಪಿಸಿಕೊಳ್ಳಬೇಕು. ಆದರೆ ಇದನ್ನು ಒಂದಿಷ್ಟೂ ಅಡ್ಡದಾರಿಗಳು, ತಪ್ಪುಗಳು ಇಲ್ಲದಂತೆ ನಿರ್ವಹಿಸುವುದು ಮಾತನಾಡಿದಷ್ಟು ಸುಲಭವಲ್ಲ. ಒಂದು ಸಮಾಜವಾದಿ ದೇಶ ಮಿಕ್ಕೆಲ್ಲ ಸಮಾಜವಾದಿ ದೇಶಗಳ ವಿದೇಶಿ ನೀತಿ ಹಿತಾಸಕ್ತಿಗಳನ್ನು ಪ್ರತಿನಿಧಿಸುವುದಿಲ್ಲ ಅಥವಾ ಎಲ್ಲಕ್ಕೂ ಒಂದೇ ಮಾದರಿಯ ನೀತಿ ಇರುವಂತಿಲ್ಲ.

ಸಾಮ್ರಾಜ್ಯಶಾಹಿ ದೇಶಗಳು, ಹೊಸದಾಗಿ ಸ್ವಾತಂತ್ರ್ಯ ಪಡೆದ ದೇಶಗಳು ಇವೆಲ್ಲವೂ ಒಂದೊಂದು ಸಮಾಜವಾದಿ ದೇಶಕ್ಕೆ ಒಂದೊಂದು ರೀತಿಯ ವಿದೇಶಿ ನೀತಿಯನ್ನು ಅನುಸರಿಸುತ್ತವೆ. ಆದರೆ ಮೂಲಭೂತವಾಗಿ ಇವೆಲ್ಲವೂ ವಿಶ್ವದ ಬಂಡವಾಳಶಾಹಿಯ ಮತ್ತು ತಮ್ಮ ದೇಶದ ಬಂಡವಾಳಶಾಹಿಯ ಹಿತಗಳನ್ನು ಗಮನದಲ್ಲಿರಿಸಿಕೊಂಡಿರುತ್ತವೆ. ಇದರ ಪರಿಣಾಮವಾಗಿ, ಸಮಾಜವಾದಿ ವ್ಯವಸ್ಥೆಯುಳ್ಳ ದೇಶಗಳ ಮೇಲೆ ಇವುಗಳ ಪ್ರಭಾವ ಒಂದೇ ರೀತಿ ಇರುವುದಿಲ್ಲ. ವಿವಿಧ ಸಮಾಜವಾದಿ ದೇಶಗಳು ಬೇರೆ ಬೇರೆ ಅಂಶಗಳಿಗೆ ಒತ್ತು ಕೊಡುವಂತಾಗುತ್ತದೆ. ಈ ಅಪಮಾರ್ಗಗಳನ್ನು ನಿವಾರಿಸುವುದು ಹೇಗೆ, ಪರಿಹರಿಸುವುದು ಹೇಗೆ ಎಂಬ ಸಮಸ್ಯೆಗಳನ್ನು ಒತ್ತಟ್ಟಿಗಿಡುವಂತೆಯೂ ಇಲ್ಲ. ಅವುಗಳಿಗೆ ಒಂದೇ ಮಾದರಿಯ ನೀತಿಯನ್ನು ಹೇರುವಂತೆಯೂ ಇಲ್ಲ.

ಕೊನೆಗೆ ಈ ಬಗ್ಗೆ ವಿವಿಧ ಆಳುವ ಕಮ್ಯುನಿಸ್ಟ್ ಪಕ್ಷಗಳು ಕೈಗೊಳ್ಳುವ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ನಿರ್ಣಯಗಳು ಆಯಾ ಪಕ್ಷಗಳು ಮತ್ತು ಸರ್ಕಾರಗಳ ನಾಯಕತ್ವಗಳ ರಾಜಕೀಯ ಸೈದ್ಧಾಂತಿಕ ಪಕ್ವತೆಯ ಮಟ್ಟವನ್ನು ಅವಲಂಬಿಸುತ್ತವೆ. ಬಲ ಅಥವಾ ಎಡಸ್ವರೂಪದ ಅಪಮಾರ್ಗಗಳ ಸಾಧ್ಯತೆ ಇಲ್ಲದೆ ಇಲ್ಲ. ಈಚಿನ ಇತಿಹಾಸದಿಂದ ಇದಕ್ಕೆ ಸಾಕಷ್ಟು ಉದಾಹರಣೆಗಳನ್ನು ಒದಗಿಸಬಹುದು. ಬಲ ಅಥವಾ ಎಡ ಅಪಮಾರ್ಗಗಳು, ರಾಜಕೀಯ ಅಧಿಕಾರವನ್ನು ಇನ್ನೂ ಪಡೆಯದಿರುವ ಕಮ್ಯುನಿಸ್ಟ್ ವಲಯದ ಕಾರ್ಯದಲ್ಲಿಯೂ ಪ್ರವೇಶಿಸುವುದಲ್ಲದೆ, ಆಳುವ ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳಿಗೂ ಇದರ ಸೋಂಕು ತಟ್ಟುತ್ತದೆ. ಇದು ಕೆಲವೊಮ್ಮೆ ಮಾರಕವಾಗಿ ಪರಿಣಮಿಸುವುದುಂಟು.

ವಿವಿಧ ಪರಿಸ್ಥಿತಿಗಳು :

ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿ, ಸಮಾಜವಾದಿ ದೇಶಗಳಲ್ಲಿ ಅಧಿಕಾರ ಹೊಂದಿರುವ ಪಕ್ಷಗಳೂ ಇವೆ, ಅದಕ್ಕಾಗಿ ಇನ್ನೂ ಹೋರಾಡುತ್ತಿರುವ ಪಕ್ಷಗಳೂ ಹಲವಾರು ಇವೆ. ಈ ವಿವಿಧ ಘಟಕಗಳ ರಾಜಕೀಯ-ರಾಜತಾಂತ್ರಿಕ ನೀತಿಗಳು, ಅವು ಕಾರ್ಯನಿರ್ವಹಿಸುತ್ತಿರುವ ಪ್ರದೇಶಗಳ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ. ಬಂಡವಾಳಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ವಿಶ್ವದ ಕಾರ್ಮಿಕವರ್ಗ ಅಧಿಕಾರವನ್ನು ಪಡೆಯಬೇಕೆನ್ನುವುದು ಇವುಗಳೆಲ್ಲದರ ಏಕೈಕ ಗುರಿಯಾಗಿದ್ದರೂ ಸಹ ಆ ನೀತಿಗಳಲ್ಲಿ ವ್ಯತ್ಯಾಸ ಇರುತ್ತದೆ. ಅಧಿಕಾರದಲ್ಲಿರುವ ಪಕ್ಷಗಳು, ಬೆಳೆದ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿ ದೇಶಗಳ ಪಕ್ಷಗಳು, ಹೊಸದಾಗಿ ಸ್ವತಂತ್ರವಾದ ಮತ್ತು ಆರ್ಥಿಕವಾಗಿ ಹಿಂದುಳಿದ, ಅವಲಂಬಿತವಾಗಿರುವ ದೇಶಗಳ ಪಕ್ಷಗಳು ಇವುಗಳೆಲ್ಲದರ ಕಾರ್ಮಿಕ ಅಂತರರಾಷ್ಟ್ರೀಯ ಕರ್ತವ್ಯಗಳೂ ಒಂದೇ ಆಗಿದ್ದರೂ, ಅದರ ವಿವರಗಳಲ್ಲಿ ಅವು ಆಯಾ ದೇಶಗಳ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಅನುಸರಿಸಿ ಭಿನ್ನಭಿನ್ನವಾಗಿರುತ್ತವೆ.

ಈಗ ನಾವು, 1864ರ ಸೆಪ್ಟೆಂಬರ್ 28ರಲ್ಲಿ ಮಾರ್ಕ್ಸ್ ಮತ್ತು ಎಂಗೆಲ್ಸರು ಸಂಘಟಿಸಿ, ಭಾಷಣಮಾಡಿದ ಕೆಲಸಗಾರರ ಅಂತರರಾಷ್ಟ್ರೀಯ ಸಂಘದ ಕಾಲದಲ್ಲಾಗಲೀ, ಮೊದಲ ಅಂತರರಾಷ್ಟ್ರೀಯದ ಕಾಲದಲ್ಲಾಗಲೀ, 1917ರ ಯಶಸ್ವಿ ರಷಿಯನ್ ಸಮಾಜವಾದಿ ಕ್ರಾಂತಿಯ ನಂತರ 1919ರ ಮಾರ್ಚ್‌ನಲ್ಲಿ ಲೆನಿನ್ ಮತ್ತು ಸೋವಿಯೆತ್ ಪಕ್ಷ ಸಂಘಟಿಸಿದ ಮೂರನೇ ಅಂತರರಾಷ್ಟ್ರೀಯದ ಕಾಲದಲ್ಲಾಗಲೀ ಜೀವಿಸುತ್ತಿಲ್ಲ.

ವಿಶ್ವದ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯೇ ಮೂರನೇ ಅಂತರರಾಷ್ಟ್ರೀಯವನ್ನು 1943ರಲ್ಲಿ ವಿಸರ್ಜನೆಗೊಳಿಸಿತು. ಏಕೆಂದರೆ, ವಿಶ್ವದ ಚಳುವಳಿಯನ್ನು, ಕಮ್ಯುನಿಸ್ಟ್ ಅಂತರರಾಷ್ಟ್ರೀಯ ಎಂಬ ಒಂದು ಕೇಂದ್ರ ವಿಶ್ವಸಂಘಟನೆಯ ಮೂಲಕ ಸಮನ್ವಯಗೊಳಿಸುವುದು ಮತ್ತು ಅದಕ್ಕೆ ಮಾರ್ಗದರ್ಶನ ನೀಡುವುದು ಅಗತ್ಯವಿಲ್ಲ ಎಂದು ಭಾವಿಸಲಾಯಿತು.

1943ರಲ್ಲಿ ಮೂರನೇ ಅಂತರರಾಷ್ಟ್ರೀಯ ವಿಸರ್ಜಿತವಾದ ಮೇಲೆ ಮತ್ತು 1945-46ರಲ್ಲಿ ಪೂರ್ವ ಯೂರೋಪಿನಲ್ಲಿ ಅನೇಕ ಹೊಸ ಸಮಾಜವಾದಿ ದೇಶಗಳು ಉದಯವಾದ ಮೇಲೆ, ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಕೆಲವು ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶದಿಂದ ಕಮ್ಯುನಿಸ್ಟ್ ವಾರ್ತಾಕೇಂದ್ರವೊಂದನ್ನು 1947ರಲ್ಲಿ ರಚಿಸಲಾಗಿತ್ತು. ಆದರೆ ಇದೂ ಕೂಡ ಪ್ರಯೋಜನವಿಲ್ಲವೆಂದು ವಿಸರ್ಜಿತಗೊಳಿಸಲಾಯಿತು.

1957 ಮತ್ತು 1969ರಲ್ಲಿ ಎರಡು ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಮೇಳಗಳು, ಅಭಿಪ್ರಾಯಗಳ ಮತ್ತು ಅನುಭವಗಳ ವಿನಿಮಯಕ್ಕೆಂದು, ಮತ್ತು ವಿಶ್ವ ಪರಿಸ್ಥಿತಿಯ ಬಗ್ಗೆ ಒಂದು ಸಾಮಾನ್ಯವಾಗಿ ಒಪ್ಪಿತವಾದ ವಿತರಣೆಯನ್ನು ರೂಪಿಸಲೆಂದು, ಮತ್ತು ವಿಶ್ವ ಚಳುವಳಿಯ ಮುಂದಿನ ಕರ್ತವ್ಯಗಳನ್ನು ಚರ್ಚಿಸಲೆಂದು ಸೇರಿದ್ದವು. ಆದರೆ ಅದೊಂದೂ ಅಲ್ಲಿ ನಡೆಯಲಿಲ್ಲ. ಏಕೆಂದರೆ ಕಳೆದ 20 ವರ್ಷಗಳಲ್ಲಿ ಅಂಥ ವಿಶ್ವಮೇಳ ಸಾಧ್ಯವಾಗಿಲ್ಲ.

1945-46ರಲ್ಲಿ ಫ್ಯಾಸಿಸ್ಟ್ ವಿರೋಧಿ ಯುದ್ಧದಲ್ಲಿ ಗೆಲುವು ಪಡೆದ ನಂತರ ವಿಶ್ವ ಚಳುವಳಿಯಲ್ಲಿ ಅಗಾಧ ಬೆಳವಣಿಗೆ ಆಗಿದ್ದು, ಇದು ಆಳುವ ಕಮ್ಯುನಿಸ್ಟ್ ಪಕ್ಷಗಳಲ್ಲಿ ಮತ್ತು ಅಧಿಕಾರದಲ್ಲಿಲ್ಲದ ಪಕ್ಷಗಳಲ್ಲಿ ಬಲ ಮತ್ತು ಎಡ ಪರಿಷ್ಕರಣವಾದಿ ಪ್ರವೃತ್ತಿಗಳನ್ನೂ ಬೆಳೆಸಿದೆ. ವಿಶ್ವದ ಕಮ್ಯುನಿಸ್ಟ್ ಚಳುವಳಿಗೆ ಸರ್ವರಿಂದ ಒಪ್ಪಿತವಾದ ಸೈದ್ಧಾಂತಿಕ-ರಾಜಕೀಯ ವೇದಿಕೆ ಮತ್ತು ರಾಜಕೀಯ ಶಿಸ್ತನ್ನು ರೂಪಿಸಬಲ್ಲ ಒಂದು ಅಂತರರಾಷ್ಟ್ರೀಯ ಘಟಕ ಯಾವುದೂ ಇಲ್ಲ.

ಭಯಂಕರ ಬೆಳವಣಿಗೆ :

ಕೆಲವು ದೊಡ್ಡ ಸಮಾಜವಾದಿ ದೇಶಗಳ ಅಂತರರಾಷ್ಟ್ರೀಯ ಸಂಬಂಧಗಳಲ್ಲಿ ಆದಿರುವ ಇನ್ನೊಂದು ಭಯಂಕರ ಬೆಳವಣಿಗೆಯನ್ನು ನಾವು ನಿರ್ಲಕ್ಷಿಸುವಂತಿಲ್ಲ. 1969ರಲ್ಲಿ ಚೀನಕ್ಕೂ, ಸೋವಿಯೆತ್ ದೇಶಕ್ಕೂ ನಡೆದ ಸಶಸ್ತ್ರ ಗಡಿಕಲಹ, ಕಂಪೂಚಿಯದ ಪೋಲ್‌ಪೋಟ್ ಆಡಳಿತಕ್ಕೂ ಸಮಾಜವಾದಿ ವಿಯೆಟ್‌ನಾಮ್‌ಗೂ ನಡೆದ, ನಂತರ ಪೋಲ್‌ಪೋಟ್ ಆಡಳಿತವನ್ನು ಕಿತ್ತೊಗೆದ ಬಹುಕಾಲದ ಯುದ್ಧ, ಚೀನದ ಆಕ್ರಮಣಕಾರಿ ಪಡೆಗಳು ಮತ್ತು ವಿಯೆಟ್‌ನಾಮ್ ಪಡೆಗಳ ನಡುವಿನ 21 ದಿನಗಳ ಸಮರ ಇವೆಲ್ಲವೂ ಒಂದೆರಡು ದಶಕಗಳ ಹಿಂದೆ ಕಮ್ಯುನಿಸ್ಟರು ಊಹಿಸಿಕೊಳ್ಳಲೂ ಸಾಧ್ಯವಾಗಿರದಿದ್ದಂತ ಆತಂಕಕಾರಿ ಬೆಳವಣಿಗೆಗಳು. ವಿಶ್ವ ಚಳುವಳಿಗೆ ಈ ಬೆಳವಣಿಗೆಗಳು ಅದೆಷ್ಟೇ ಅಪಾಯಕಾರಿಯಾಗಿದ್ದರೂ ಸಹ, ಯಾವ ಕಮ್ಯುನಿಸ್ಟನೂ ಈ ಬಗ್ಗೆ ಕಣ್ಣು ಮುಚ್ಚಿ ಕೂಡುವಂತಿಲ್ಲ ಅಥವಾ ಹೆಚ್ಚು ಉತ್ಸಾಹದಿಂದ ಕಮ್ಯುನಿಸ್ಟ್ ಐಕ್ಯತೆಗೆ ಕೆಲಸಮಾಡುವುದನ್ನು ಬಿಡುವಂತಿಲ್ಲ.

ಇಂಥ ಅತಿ ಸಂಕೀರ್ಣ ಮತ್ತು ಅತಿ ಕಷ್ಟಕರವಾದ ಬಿಕ್ಕಟ್ಟಿನ ಸನ್ನಿವೇಶದಲ್ಲಿ, ವಿಶ್ವದ ವಿವಿಧ ಕಮ್ಯುನಿಸ್ಟ್ ಪಕ್ಷಗಳ ನಡುವೆ ಸೋದರ ಸಂಬಂಧಗಳ ವಿಚಾರದ ಬಗ್ಗೆ ಮತ್ತು ಇದರಲ್ಲಿ ಯಾವ ನಿಯಮಗಳು ನಮಗೆ ಮಾರ್ಗದರ್ಶಿಯಾಗಿರಬೇಕೆನ್ನುವುದರ ಬಗ್ಗೆ ಚರ್ಚೆಗೆ ಒಳಗಾಗುತ್ತಿದ್ದೇವೆ. ಈ ಸೋದರ ಸಂಬಂಧಗಳ ವಿಚಾರವು ಅತ್ಯಂತ ಪ್ರಶಂಸಾರ್ಹವಾದ ಕಾರ್ಮಿಕ ಅಂತರರಾಷ್ಟ್ರೀಯತೆ ಮತ್ತು ಅದರ ಮೀರಲಾರದ ಕಟ್ಟುನಿಟ್ಟುಗಳಿಗೆ ಸಂಬಂಧಪಟ್ಟದೆಯೆಂಬುದು ನಮಗೆ ತಿಳಿದಿದೆ. ಈ ಅಮೂಲ್ಯವಾದ ಕಲ್ಪನೆಗಳನ್ನು ಸರಿಯಾಗಿ ಅರ್ಥಮಾಡಿಕೊಂಡು, ಪ್ರಾಮಾಣಿಕವಾಗಿ ಮತ್ತು ನಿಷ್ಠೆಯಿಂದ ಕಾರ್ಯಗತಗೊಳಿಸುವುದು ನಮ್ಮ ಪ್ರಯತ್ನವಾಗಿದೆ.

ಸಮಾಜವಾದಿ ದೇಶಗಳಲ್ಲಿ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ರಂಗಗಳಲ್ಲಿರುವ ವಿವಿಧ ಹಂತಗಳಿಂದುಂಟಾದ ಅಸಮಾನತೆಗಳು, ಆ ದೇಶಗಳು ಸಮತಾವಾದದ ಉನ್ನತ ಮಟ್ಟವನ್ನು ಮುಟ್ಟುವವರೆಗೂ ಹೋಗುವುದಿಲ್ಲ. ವಿವಿಧ ದೇಶಗಳ ಮೊದಲ ಹಂತದ ಸಮಾಜವಾದದ ಬಗ್ಗೆ ಮಾರ್ಕ್ಸ್‌ನ ಕೆಲವು ಆಲೋಚನೆಗಳನ್ನು ನೋಡಿದಾಗ, ಈ ಅಸಮಾನ ಬೆಳವಣಿಗೆ ಮತ್ತು ವಿವಿಧ ಸಮಾಜವಾದಿ ದೇಶಗಳ ನಡುವಿನ ಪರಸ್ಪರ ಸಂಬಂಧಗಳ ಬಗ್ಗೆ ಸ್ವಲ್ಪ ತಿಳುವಳಿಕೆ ಮೂಡಬಹುದು: "ವ್ಯಕ್ತಿಯು ದುಡಿಮೆಯ ವಿಭಜನೆಗೆ ಒಳಗಾದಾಗ, ಮಾನಸಿಕ ಮತ್ತು ದೈಹಿಕ ಶ್ರಮದ ಬಗ್ಗೆ ವ್ಯತ್ಯಾಸ ಇಲ್ಲದೆ ಆದಾಗ, ದುಡಿಮೆ ಜೀವನ ಮಾಡುವುದಕ್ಕೆ ಒಂದು ಸಾಧನ ಮಾತ್ರ ಆಗದೆ, ಜೀವನದ ಮುಖ್ಯ ಬಯಕೆಯೂ ಆದಾಗ, ವ್ಯಕ್ತಿಯ ಸರ್ವಾಂಗೀಣ ಬೆಳವಣಿಗೆಯೊಂದಿಗೆ ಉತ್ಪಾದನಾ ಶಕ್ತಿಗಳೂ ಹೆಚ್ಚಾದಾಗ ಮತ್ತು ಎಲ್ಲ ಸಹಕಾರಿ ಸಂಪತ್ತೂ ವೃದ್ಧಿಸಿದಾಗ- ಎಂದರೆ ಕಮ್ಯುನಿಸ್ಟ್ ಸಮಾಜದ ಉನ್ನತ ಹಂತದಲ್ಲಿ ಸಂಕುಚಿತ ಬೂರ್ಜ್ವಾಹಕ್ಕು ಇಡಿಯಾಗಿ ನಿವಾರಣೆಯಾಗಿ, ಸಮಾಜ ಈ ಘೋಷಣೆಯನ್ನು ಹಾಕಿಕೊಳ್ಳಬಹುದು. ಪ್ರತಿಯೊಬ್ಬರಿಂದ ಅವರ ಸಾಮರ್ಥ್ಯಕ್ಕೆ ತಕ್ಕಂತೆ, ಪ್ರತಿಯೊಬ್ಬರಿಗೂ ಅವರ ಅಗತ್ಯಕ್ಕೆ ತಕ್ಕಂತೆ!"

ಇದೆಲ್ಲ ಹೇಳಿದರೂ, ವಿವಿಧ ಸಮಾಜವಾದಿ ದೇಶಗಳ ನಡುವೆ ಸೋದರ ಸಂಬಂಧಗಳನ್ನು ಬೆಳೆಸುವುದರಲ್ಲಿ ಇರುವ ಅಡ್ಡಿಗಳು ಮತ್ತು ಕಷ್ಟಗಳನ್ನು ನಿವಾರಿಸಬೇಕಾದರೆ, ಅತ್ಯುನ್ನತ ಮಟ್ಟದ ಕಾರ್ಮಿಕ ಅಂತರರಾಷ್ಟ್ರೀಯ ಪ್ರಜ್ಞೆ ಮತ್ತು ಅದರ ಕಟ್ಟುನಿಟ್ಟಾದ ಮತ್ತು ನಿಜವಾದ ಜಾರಿ ಇದೊಂದರಿಂದ ಮಾತ್ರ ಸಾಧ್ಯ. ಈ ಬಗ್ಗೆ ವಿಶ್ವದ ಎಲ್ಲ ಕಮ್ಯುನಿಸ್ಟ್ ವಲಯಗಳೂ ನಿರಂತರ ಮತ್ತು ಪ್ರಜ್ಞಾಪೂರ್ವಕ ಯತ್ನಗಳನ್ನು ನಡೆಸಬೇಕಾದ್ದು ಅಗತ್ಯ.

(7ನೇ ಪುಟ ನೋಡಿ)

ಕುತ್ತಾರು ಪ್ರದೇಶ ಯುವಜನರ ಸಭೆ

ಇದೇ ತಾ. 14-9-1980ರಂದು ಸಂಜೆ ಗಂಟೆ 4ಕ್ಕೆ ರಾಜ್ಯ ಸಮುದಾಯದ ಉಪಾಧ್ಯಕ್ಷರಾದ ಬಿ. ಮಾಧವ ಇವರ ಘನ ಅಧ್ಯಕ್ಷತೆಯಲ್ಲಿ ಮಂಗಳೂರು ತಾಲ್ಲೂಕು ಕುತ್ತಾರು ಪದವು ಯುವಕ ಸಂಘದಲ್ಲಿ ಯುವಜನರ ಸಭೆಯು ನಡೆಯಿತು. ಸಭೆಯಲ್ಲಿ ಮಂಗಳೂರು ತಾಲ್ಲೂಕು ಯುವಜನ ಸಂಘಟನೆಯ ಸಂಚಾಲಕ ಬಿ. ಉಮನಾಥ್ ಇವರು ಭಾಗವಹಿಸಿ ಈ ಸಭೆಯಲ್ಲಿ ಮಾತನಾಡುತ್ತಾ ಜಾತೀಯತೆ, ನಿರುದ್ಯೋಗ ಹಾಗೂ ಧರ್ಮದ ಹೆಸರಿನಲ್ಲಿ ಯುವಜನರನ್ನು ಕಾಡುತ್ತಲಿರುವ ಅನೇಕ ಸಮಸ್ಯೆಗಳಲ್ಲಿ ಯುವಜನರನ್ನು ಬಲಿ ಪಶುಗಳನ್ನಾಗಿ ಮಾಡುವುದನ್ನು ಕಾಣುತ್ತೇವೆ. ಈ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಬೇಕಾದರೆ ಯುವಜನರು ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿ ಎಡ ಪ್ರಜಾಪ್ರಭುತ್ವ ಶಕ್ತಿಯನ್ನು ಬೆಳೆಸಬೇಕಾದುದು ತುರ್ತಿನ ಕೆಲಸವಾಗಿದೆ ಎಂದು ವಿವರಿಸಿದರು.

ರಾಜ್ಯ ಸಮುದಾಯದ ಉಪಾಧ್ಯಕ್ಷ ಬಿ. ಮಾಧವನವರು ಮಾತನಾಡಿ ಇಂದು ಬಂಡವಾಳಶಾಹಿ ಸಮಾಜದಲ್ಲಿ ಯುವಜನರನ್ನು ಸ್ಥಾಪಿತಹಿತಾಸಕ್ತಿ ಹಾಗೂ ಬಲಪ್ರತಿಗಾಮಿ ಶಕ್ತಿಗಳು ಜಾತೀಯ ಹಾಗೂ ಭಾಷೆಯ ನೆಪವೊಡ್ಡಿ ಯುವಶಕ್ತಿಯನ್ನು ತಪ್ಪುಹಾದಿಗೆಳೆಯಲು ಪ್ರಯತ್ನಿಸುತ್ತಿರುವುದನ್ನು ವಿವರಿಸಿ ಈ ದುಷ್ಟಶಕ್ತಿಗಳ ವಿರುದ್ಧ ಎಲ್ಲಾ ಯುವಕ ಯುವತಿಯರು ಸಂಘಟಿತರಾಗಬೇಕಾದ ಅವಶ್ಯಕತೆಯನ್ನು ಒತ್ತಿಹೇಳಿದರು. ಆದುದರಿಂದ ಮಂಗಳೂರು ಪ್ರಜಾಸತ್ತಾತ್ಮಕ ಯುವಕ 'ಸಂಘ'ಟನೆಯನ್ನು ಕುತ್ತಾರು ಪ್ರದೇಶದಲ್ಲಿ ಅತೀ ಬಲಿಷ್ಠವಾಗಿ ಕಟ್ಟಿ ಬೆಳೆಸಬೇಕಾದದ್ದು ಎಲ್ಲಾ ಯುವಕ, ಯುವತಿಯರ ಕರ್ತವ್ಯವಾಗಿದೆ ಎಂದರು.

ಕೊನೆಯಲ್ಲಿ ಕುತ್ತಾರು ಪದವು ಯುವಕ ಸಂಘದ ಅಧ್ಯಕ್ಷ ಕೆ. ಲಕ್ಷ್ಮಣ ವಂದಿಸಿದರು.

ಪುತ್ತೂರಲ್ಲಿ ರೈತ-ಕೃಷಿ ಕೂಲಿಗಾರರಿಂದ ಮತಪ್ರದರ್ಶನ

ರೈತಸಂಘದ ನೇತೃತ್ವದಲ್ಲಿ ಪುತ್ತೂರು ತಾಲ್ಲೂಕು ಕಚೇರಿಯೆದುರು ರೈತ ಕೃಷಿ ಕಾರ್ಮಿಕರ ಬೃಹತ್ ಮತಪ್ರದರ್ಶನವನ್ನು ಜರಗಿಸಲಾಯಿತು. ಸಾಧಾರಣ 300 ಜನ ರೈತ ಕೃಷಿ ಕಾರ್ಮಿಕರು ಘೋಷಣೆಗಳನ್ನು ಕೂಗುತ್ತ ನಗರದ ಮುಖ್ಯ ಬೀದಿಗಳಲ್ಲಿ ಸಾಗಿ ಹದಿನೇಳು ಬೇಡಿಕೆಗಳ ರುವ್ಜಮನವಿಯನ್ನು ತಹಸೀಲ್ದಾರರವರಿಗೆಕೊಟ್ಟು,ರೈತ ಕೃಷಿಕಾರ್ಮಿಕರ ಬೇಡಿಕೆಗಳನ್ನು ಕೂಡಲೇ ಈಡೇರಿಸಿಕೊಡುವಂತೆ ಸರಕಾರವನ್ನು ಒತ್ತಾಯಿಸಲಾಯಿತು.

ಬಳಿಕ ಇದರ ಅಂಗವಾಗಿ ಪುತ್ತೂರು ಬಸ್ ನಿಲ್ದಾಣದ ಬಳಿಯಲ್ಲಿ ಸಾರ್ವಜನಿಕ ಸಭೆಯನ್ನು ನಡೆಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ದಲಿತ ಕಾರ್ಮಿಕ ಮುಖಂಡರೂ ಪುತ್ತೂರು ರೈತಸಂಘದ ಉಪಾಧ್ಯಕ್ಷರೂ ಆದ ಕಾಂ. ಬಿ. ರಾಮಕೃಷ್ಣನವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದ. ಕ. ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಸಿ. ಜನಾರ್ಧನ ನಾಯಕ್ ಮತ್ತು ರಸ್ತೆಸಾರಿಗೆ ಸಂಸ್ಥೆಯ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾಂ. ಗೋಪಾಲಶೆಟ್ಟಿಯವರು ಉಪಸ್ಥಿತರಿದ್ದರು. ಆರಂಭದಲ್ಲಿ ಕಾಂ. ಬಿ ಸರಸ್ವತಿಯವರು "ಸಾವಿರಾರು ನದಿಗಳು" ಕ್ರಾಂತಿ ಗೀತೆಯನ್ನು ಹಾಡಿದರು. ರೈತಸಂಘದ ಕಾರ್ಯದರ್ಶಿ ಕಾಂ. ಎಚ್. ಲಕ್ಷ್ಮಣಗೌಡರು ಸ್ವಾಗತಿಸಿದರು.

ಕಾಂ. ಗೋಪಾಲಶೆಟ್ಟಿಯವರು ಮಾತನಾಡುತ್ತಾ, ಪ್ರಸಕ್ತ ಪರಿಸ್ಥಿತಿಯಲ್ಲಿ ರೈತ ಕಾರ್ಮಿಕರ ಜೀವನ ಪರಿಸ್ಥಿತಿ ತೀರಾ ಶೋಚನೀಯವಾಗಿದೆ. ರೈತರು ಕಾರ್ಮಿಕರು ಸಂಘಟಿತರಾಗಿ ಹೋರಾಟ ಮಾಡದಂತೆ ಕರ್ನಾಟಕ ಸರ್ಕಾರವು ಅಗತ್ಯ ಸೇವಾ ಮಸೂದೆ, ಆರ್ಥಿಕ ತುರ್ತುಪರಿಸ್ಥಿತಿಯನ್ನು ತರುವ ಸೂಚನೆ ಕೇಳಿಬರುತ್ತಿದೆ. ಆದರೆ ದೇಶವಿಡೀ ಅತ್ಯಾಚಾರ ಮಾನಭಂಗ ನಡೆದು ಜನಸಾಮಾನ್ಯರನ್ನು ಕೇಳುವವರೇ ಇಲ್ಲದಂತಾಗಿದೆ. ಆದುದರಿಂದ ಪ್ರತಿಯೊಂದು ಜನ ವಿಭಾಗ ಎಚ್ಚೆತ್ತು ವ್ಯಾಪಕ್ವಾದಿ ಹೋರಾಟಕ್ಕೆ ಸಜ್ಜಾಗಲು ಕರೆಯನ್ನಿತ್ತು ಕಾರ್ಮಿಕರು ಸದಾ ತಮ್ಮ ಬೆಂಬಲವನ್ನು ರೈತರಿಗೆ ಕೊಡಲು ಸಿದ್ಧರೆಂದು ತಿಳಿಸಿದರು.

ಬಳಿಕ ಕಾಂ. ಜನಾರ್ಧನ ನಾಯಕ್‌ರು ತಮ್ಮ ಸುದೀರ್ಘ ಭಾಷಣದಲ್ಲಿ ರೈತರ, ಬಡವರ ಮೇಲೆ ಸರಕಾರ ಮತ್ತು ಭೂಮಾಲಕರು ಮಾಡುವ ಅನ್ಯಾಯ ಶೋಷಣೆಗಳನ್ನು ವಿವರಿಸಿದರು. ಬಡವನಿಗೆ ದರ್ಖಾಸ್ತು, ರೈತನಿಗೆ ಭೂಮಿ ಕಾರ್ಮಿಕ ಜೀವನಾವಶ್ಯಕ ಮಜೂರಿ ಸಿಗಲು ಸಂಘಟಿತ ಹೋರಾಟವೊಂದೇ ದಾರಿ, ಏಕೆಂದರೆ ರೈತ ಬೆವರು ಸುರಿಸಿ, ಭೂಮಿಯಲ್ಲಿ ಬೆಳೆಸಿದ ಫಸಲಿಗೆ ಪೇಟೆಯಲ್ಲಿ ಆರಾಮವಾಗಿರುವ ದೊಡ್ಡ ಶ್ರೀಮಂತ ವ್ಯಾಪಾರಿಗೆ ಅಧಿಕ ಲಾಭ ಸಲ್ಲುತ್ತದೆ. ಅವನೇ ರೈತನ ಫಸಲಿಗೆ ಬೆಲೆ ನಿಗದಿಪಡಿಸುವವನು. ರೈತನಿಗೆ ಯೋಗ್ಯ ಬೆಲೆ ಸಿಗಲು ರೈತ ಸಂಘಟನೆಯಡಿಯಲ್ಲಿ ಸಂಘಟಿತರಾಗಲು ಕರೆಯನ್ನಿತ್ತರು.

ಕಾಂ. ಎಚ್. ಲಕ್ಷ್ಮಣಗೌಡರು ಮಾತನಾಡಿ ಪುತ್ತೂರು ತಾಲ್ಲೂಕಿನಾದ್ಯಂತ ಬಡ ಆಕ್ರಮದಾರರಿಗೆ ಇನ್ನೂ ಪಟ್ಟೆ ಸಿಗದೆ, ತಾವು ನಟ್ಟು ಬೆಳೆಸಿದ ಕೃಷಿಗಳು ಸರಕಾರದ ಕಾನೂನು ಸಿಕ್ಕಿ ಹಾಳಾಗುವುದನ್ನು ವಿವರಿಸಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾಂ. ಬಿ. ರಾಮಕೃಷ್ಣನವರು 17 ಬೇಡಿಕೆಗಳನ್ನು ಓದಿದರು. ಈ ಬೇಡಿಕೆಗಳು ಈಡೇರಬೇಕಾದರೆ ರೈತರು ಕಾರ್ಮಿಕರೇ ಮೊದಲಾದ ಬಡವರು ಕೆಂಪು ಬಾವುಟದಡಿಯಲ್ಲಿ ಸಂಘಟಿತರಾಗಬೇಕು. ಜನರ ಸಮಸ್ಯೆಗಳಿಗೆ ಪರಿಹಾರ ನೀಡಬಲ್ಲ ಸಮರ್ಥ ಪಕ್ಷವೆಂದರೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಎಂದರಲ್ಲದೆ, ಪ್ರತಿಯೊಬ್ಬರೂ ಕೆಂಬಾವುಟದಡಿಯಲ್ಲಿ ಸಂಘಟಿತರಾಗಲು ಕರೆಯನ್ನಿತ್ತರು. ಕೊನೆಗೆ ಸಹ ಕಾರ್ಯದರ್ಶಿ ಕಾಂ. ಸೆಬೆಸ್ಟೀನ್ ಧನ್ಯವಾದಗಳನ್ನಿತ್ತರು.

○

ಬೀಡಿ ಕಾರ್ಮಿಕರ ವಿವಿಧ ಸಂಘಟನೆಗಳ ಜಂಟಿ ಸಭೆ

ದಿನಾಂಕ 20-9-80 ರಂದು ಮೈಸೂರಲ್ಲಿ ಶ್ರೀ ಅಜೀಜ್‌ಸೇಟರು ಬೀಡಿ ಕಾರ್ಮಿಕರ ನಾಯಕರುಗಳ ಸಭೆಯನ್ನು ಕರೆದಿದ್ದರು. ಸಭೆಯಲ್ಲಿ ಸಿ. ಐ. ಟಿ. ಯು.ವಿನ ಪ್ರತಿನಿಧಿಗಳಾಗಿ ಕಾಂ. ಪಿ ರಾಮಚಂದ್ರ ರಾವ್, ಕಾಂ. ಎಂ. ಎನ್. ಉಗ್ರಪ್ಪ ಮತ್ತು ಕಾಂ. ಮಹಮದ್ ದಸ್ತಗೀರ್ ಭಾಗವಹಿಸಿದ್ದರು.

ಕಾರ್ಮಿಕರ ಸ್ಥಿತಿಗತಿಗಳ ಸುದೀರ್ಘ ಚರ್ಚೆ ನಡೆಸಿ ಕೆಳಕಂಡ ನಿರ್ಣಯಕ್ಕೆ ಬರಲಾಯಿತು, 1) ಬೀಡಿ ಎಲೆಯ ಅವರೇಜ್ ನ್ಯಾಯರೀತಿಯಲ್ಲಿ ನಿಗದಿಯಾಗಬೇಕು. 2) ಸಾವಿರ ಬೀಡಿಯನ್ನು ಕಟ್ಟುವ ಮಜೂರಿ 12 ರೂ ಆಗಬೇಕು. 3) ಕಾಂಟ್ರ್ಯಾಕ್ಟ್ ಪದ್ಧತಿಯನ್ನು ರದ್ದುಪಡಿಸಬೇಕು.

ಈ ಬೇಡಿಕೆಗಳನ್ನು ಮಂಡಿಸಿ ರಾಜ್ಯದ ಎಲ್ಲ ಬೀಡಿ ಕಾರ್ಮಿಕರ ಜಂಟಿ ಹೋರಾಟವನ್ನು ರೂಪಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಅಲ್ಲದೆ ಬೀಡಿ ಮೇಲಿರುವ ತೆರಿಗೆಯನ್ನು ರದ್ದುಗೊಳಿಸಿ ಹೊಗೆಸೊಪ್ಪಿನ ಮೇಲೆ ವಿಧಿಸಬೇಕೆಂದು ಮತ್ತು ನಿಲುಗಡೆಯಾಗಿರುವ ವೆಲ್‌ಫೇರ್ ಸೆಸ್‌ನ್ನು 25ಪೈಸೆಯಿಂದ 50 ಪೈಸೆಗೆ ಏರಿಸಬೇಕೆಂದು ಕೇಂದ್ರ ಸರಕಾರವನ್ನು ಒತ್ತಾಯಿಸುವ ದಿಕ್ಕಿನಲ್ಲಿ ಹೋರಾಟ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಈ ಮೇಲಿನ ಜಂಟಿ ಸಭೆ ಬೆಂಗಳೂರಲ್ಲಿ 30-9-80ರಂದು ಸೇರಬೇಕೆಂದು ಗೊತ್ತುಪಡಿಸಲಾಗಿದೆ.

●

ಕಿದೂರಿನಲ್ಲಿ ಬಹಿರಂಗ ಸಭೆ

ದಿ.18-9-80 ರಂದು ಕುಂಬಳೆ ಪಂಚಾಯತಿನ ಕಿದೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬಹಿರಂಗ ಸಭೆ ನಡೆಯಿತು. ಮುಖ್ಯ ಅತಿಥಿಗಳಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಎಂ. ಪಿ ಕಾಂ. ರಾಮಣ್ಣ ರೈ ಆಗಮಿಸಿದ್ದರು.

ಕಾಂ. ರಾಮಣ್ಣ ರೈ ಮಾತನಾಡುತ್ತಾ ಸರ್ವಾಧಿಕಾರಿ ಶಕ್ತಿಗಳಾದ ಇಂದಿರಾ ಕಾಂಗ್ರೆಸ್ ಕೋಮುವಾದಿ ಆರ್. ಎಸ್. ಎಸ್. ಮತ್ತು ಕೋಯಾಲೀಗ್‌ನವರು ಕೇರಳ ಸರಕಾರವನ್ನು ಉರುಳಿಸುವ ತಂತ್ರದ ವಿರುದ್ಧ ಎಚ್ಚರಿಕೆ ನೀಡಿದರಲ್ಲದೆ ಈ ವಿಧ್ವಂಸಕಾರೀ ಶಕ್ತಿಗಳನ್ನು ಸೋಲಿಸುವಂತೆ ಜನತೆಗೆ ವಿನಂತಿಸಿಕೊಂಡರು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಮದನ ಆಳ್ವ ವಹಿಸಿದ್ದರು. ಸಭೆಯಲ್ಲಿ ಕುಂಬಳೆ ಪಂಚಾಯತ್ ರೈತಸಂಘದ ಅಧ್ಯಕ್ಷ ಕಾಂ. ಭಂಡಾರಿಶೆಟ್ಟಿ, ಪಕ್ಷದ ಏರಿಯಾ ಕಮಿಟಿ ಕಾರ್ಯದರ್ಶಿ ಕಾಂ. ಸಿ. ಕೇಳುನಾಯರ್ ಮತ್ತು ಕಾಂ. ರಾಮಚಂದ್ರಗಟ್ಟಿ ಮುಂತಾದವರು ಮಾತನಾಡಿದರು.

●

ಚಿಂತಾಮಣಿ ತಾ|| ಎಸ್. ಎಫ್. ಐ. ಸಭೆ

ದಿನಾಂಕ 16-‘-80 ರಂದು ಚಿಂತಾಮಣಿ ಟೌನ್ ಬೆಟ್ಟದ ಮೇಲೆ ಎಸ್. ಎಫ್. ಐ. ಸಭೆ ಜರುಗಿತು.

ಸಭೆಗೆ ಆಗಮಿಸಿದ್ದ ಪ್ರಾಂತ ರೈತ ಸಂಘದ ಖಜಾಂಚಿ ಕಾಂ. ಪಿ. ಜಗನ್ನಾಥ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಸಭೆಯಲ್ಲಿ ಬೆಂಗಳೂರು ಹೋಟೆಲ್ ಕಾರ್ಮಿಕರ ಸಂಘದ ಕಾಂ. ಅಯ್ಯಪ್ಪನ್‌ರೂ ಭಾಗವಹಿಸಿದ್ದರು.

ಪ್ರಾರಂಭದಲ್ಲಿ ಎಸ್. ಎಫ್ ಐ.ನ ಕಾರ್ಯದರ್ಶಿ ಕಾಂ. ಹರೀಂದ್ರ ಸ್ವಾಗತಿಸಿದರು. ಅಧ್ಯಕ್ಷ ಕಾಂ. ಬೈಯಾರೆಡ್ಡಿಯವರು ವಂದನಾರ್ಪಣೆ ಮಾಡಿದರು.

○

ಶ್ರೀನಿವಾಸಪುರ ರೈತಸಂಘದ ಬಹಿರಂಗ ಸಭೆ

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕ್ ರಾಯಲ್‌ಪಾಡ ಹೋಬಳಿಯ ಗೌನಪಲ್ಲಿಯಲ್ಲಿ ತಾರೀಕು 16-9-80ರಂದು ರೈತಸಂಘದ ಸದಸ್ಯರು ಹಾಗೂ ಪಾರ್ಟಿ ಕಾರ್ಯಕರ್ತರು ಬೀದಿಗಳಲ್ಲೆಲ್ಲಾ ಮೆರವಣಿಗೆ ನಡೆಸಿ, ಭೂಹೀನರಿಗೆ ಭೂಮಿ ಕೊಡಿ, ಬಾಗೇಪಲ್ಲಿಯಲ್ಲಿ ರೈತರ ಮೇಲೆ ಪೋಲೀಸರ ದಬ್ಬಾಳಿಕೆಗೆ ಧಿಕ್ಕಾರ ಎಂಬ ಘೋಷಣೆಗಳೊಂದಿಗೆ ದೇವಸ್ಥಾನದ ಮುಂದೆ ಏರ್ಪಡಿಸಿದ್ದ ವೇದಿಕೆಗೆ ತೆರಳಿದರು.

ಮೊದಲಿಗೆ ಸಿ.ವಿ.ಎಂ ಸ್ವಾಮಿಯವರು ಸ್ವಾಗತಿಸಿದರು, ಸಭೆಯನ್ನು ಉದ್ದೇಶಿಸಿ ಕೋಲಾರ ಜಿಲ್ಲಾ ರೈತಸಂಘದ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿಯವರು ಮಾತನಾಡುತ್ತಾ ಪ್ರಾಂತ ರೈತಸಂಘವು ಹೋರಾಟವನ್ನು ನಡೆಸಿ ಸಾವಿರಾರು ಎಕರೆ ಭೂಮಿಯನ್ನು ಬಡವರಿಗೆ ದೊರಕಿಸಿಕೊಟ್ಟಿದೆ ಎಂದು ಹೇಳಿದರು.

ಕರ್ನಾಟಕ ಪ್ರಾಂತ ರೈತಸಂಘದ ಖಜಾಂಚಿ ಮಾತನಾಡುತ್ತಾ, ಹೋರಾಟದ ಅನುಭವಗಳನ್ನು ಸಭಿಕರಿಗೆ ನೀಡಿದರು, ಕರ್ನಾಟಕ ರಾಜ್ಯದ ಯುವಜನ ಸಂಘಟನೆಯ ಸಂಚಾಲಕ ಕಾಂ. ಶ್ರೀರಾಮರೆಡ್ಡಿಯವರೂ ಭಾಷಣ ಮಾಡಿದರು. ಈ ಸಭೆಯಲ್ಲಿ ಆಂಧ್ರ ಪ್ರದೇಶ ಚಿತ್ತೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಹಾಜರಿದ್ದರು.

ಸಭೆಗೆ ಅಧ್ಯಕ್ಷತೆ ವಹಿಸಿದ್ದ ಕಾಂ. ಜಿ.ವಿ. ಅಶ್ವತ್ಥನಾರಾಯಣ ರೆಡ್ಡಿಯವರು ಮಾತನಾಡುತ್ತಾ ಜಿಲ್ಲೆಯಲ್ಲಿ ಬರಗಾಲ ಬಂದಿರುವುದು 11ಜನ MLAಗಳಿಗೆ ಇನ್ನೂ ಗೊತ್ತಾಗಿಲ್ಲಾ; ಅವರು ಒಳಜಗಳಗಳಲ್ಲಿ ತೊಡಗಿ ಜನತೆಯನ್ನು ಮರೆತಿದ್ದಾರೆ; ಆದುದರಿಂದ ನಾವು ಸರಕಾರದ ಕಣ್ಣು ತೆರೆಸಲು ಐಕ್ಯ ಹೋರಾಟಕ್ಕೆ ಅಣಿಯಾಗೋಣವೆಂದು ಕರೆಯಿತ್ತರು. ಕಡೆಯಲ್ಲಿ ತಾಲ್ಲೂಕ್ ರೈತಸಂಘದ ಕಾರ್ಯದರ್ಶಿ ಮುನಿಸ್ವಾಮಾಚಾರಿ ವಂದಿಸಿದರು.

●

ತಿಪಟೂರಿನಲ್ಲಿ ರೈತಸಂಘದ ಸಭೆ

ದಿನಾಂಕ 18-9-80ರಂದು ತಿಪಟೂರಿನಲ್ಲಿ ತಾಲ್ಲೂಕಿನ ರೈತ ಪ್ರತಿನಿಧಿಗಳ ಸಭೆ ಸೇರಿ ತಿಪಟೂರು ತಾಲ್ಲೂಕು ರೈತಸಂಘದ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಿತು. ಎಂ. ಆರ್. ತೋಪೆಗೌಡರು ಅಧ್ಯಕ್ಷರಾಗಿಯೂ, ಬಿ. ಡಿ. ರಾಮಯ್ಯನವರು ಉಪಾಧ್ಯಕ್ಷರಾಗಿಯೂ, ಆರ್. ಎಸ್. ಚನ್ನಬಸವಣ್ಣ ಕಾರ್ಯದರ್ಶಿಯಾಗಿಯೂ, ಟಿ. ಎಸ್. ಶಂಕರಪ್ಪನವರು ಸಹ ಕಾರ್ಯದರ್ಶಿಯಾಗಿಯೂ, ಎಂ. ಎನ್. ಸದಾಶಿವಯ್ಯನವರು ಖಜಾಂಚಿಯಾಗಿಯೂ ಆಯ್ಕೆಯಾಗಿದ್ದಾರೆ.

ರೈತರ ಸಮಸ್ಯೆಗಳ ಬಗ್ಗೆ ಹೋರಾಡಲು ತಾಲ್ಲೂಕಿನಾದ್ಯಂತ ಜಾತಿ ಮತ್ತು ಪಕ್ಷರಹಿತ ರೈತಸಂಘ ಒಂದನ್ನು ಭವಿಷ್ಯವಾಗಿ ಸಂಘಟಿಸಲು ಈ ಸಭೆಯು ತೀರ್ಮಾನಿಸಿತು.

ತಿಪಟೂರು ತಾಲ್ಲೂಕನ್ನು ಕ್ಷಾಮ ಪೀಡಿತ ಪ್ರದೇಶವೆಂದು ಘೋಷಿಸಿ ಪರಿಹಾರ ಕಾರ್ಯ ಪ್ರಾರಂಭಿಸಬೇಕೆಂದು, ರೈತರಿಗೆ ಕಡಿಮೆ ದರದಲ್ಲಿ ಅಗತ್ಯ ವಸ್ತುಗಳನ್ನು ಒದಗಿಸಬೇಕು, ದನಕರುಗಳಿಗೆ ಮೇವಿನ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಬೇಕೆಂದು, ರೈತರ ಸಾಲಗಳನ್ನು ರದ್ದುಮಾಡಬೇಕು ಎಂದು, ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ 29-9-80ರಂದು ಹಸಿವಿನಿಂದ ನರಳುತ್ತಿರುವ ರೈತರು ಮತ್ತು ದನಕರುಗಳ ಪ್ರದರ್ಶನ ನಡೆಸಲು ತೀರ್ಮಾನಿಸಲಾಯಿತು.

ಶ್ರೀ ಎಂ. ಆರ್. ತೋಪೆಗೌಡರು ಅಧ್ಯಕ್ಷತೆ ವಹಿಸಿದ್ದ ಈ ಸಭೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಪಿ. ರಾಮಚಂದ್ರರಾವ್, ಕಾಂ. ಪಿ. ಜಗನ್ನಾಥ್, ರಾಜ್ಯ ರೈತ ಮುಖಂಡರಾದ ಮಹಮದ್ ದಸ್ತಗೀರ್, ಮತ್ತು ಹೆಚ್. ಸಿ. ಚನ್ನಪ್ಪನವರು ರೈತಸಂಘಟನೆಯ ಬಗ್ಗೆ ರೈತರ ಪರಿಸ್ಥಿತಿಯ ಬಗ್ಗೆ ತಮ್ಮ ಅನುಭವಗಳನ್ನು ನೀಡಿದರು. ಕೋದಂಡರಾಮುರವರ ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

●

ಚಂದಾ ವಿವರ

ಬಿಡಿಪ್ರತಿ	: 50 ಪೈಸೆ
6 ತಿಂಗಳಿಗೆ	: 13 ರೂ.
ಒಂದು ವರ್ಷಕ್ಕೆ	: 25 ರೂ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಅದರ ಸೌಹಾರ್ದ ಸಂಬಂಧಗಳು

[5ನೇ ಪುಟದಿಂದ]

ಸಿ.ಪಿ.ಐ.(ಎಂ)ನ ನಿಲುವು :

ತೀವ್ರವಾದ ಸೈದ್ಧಾಂತಿಕ ಮತ್ತು ರಾಜಕೀಯ ಭಿನ್ನಾಭಿಪ್ರಾಯಗಳಿದ್ದರೂ ಸಹ, ಸೋದರ ಪಕ್ಷಗಳೊಂದಿಗೆ ಪಕ್ಷ-ಪಕ್ಷಗಳ ಸಂಬಂಧ, ಸೌಹಾರ್ದತೆಯನ್ನು ಸ್ಥಾಪಿಸಿಕೊಳ್ಳಬಹುದೆಂದು ಸಿ ಪಿ ಐ (ಎಂ) ಮೊದಲಿಂದಲೂ ಭಾವಿಸಿದೆ.

ಆಳುವ ಕಮ್ಯುನಿಸ್ಟ್ ಪಕ್ಷಗಳು ಮತ್ತು ಸಿ. ಪಿ. ಐ. (ಎಂ) ನಡುವೆ ಸೋದರ ಸಂಬಂಧಗಳು ಇಲ್ಲದಿದ್ದರೂ ಸಹ ಅದು ಸಮಾಜವಾದ ಮತ್ತು ಸಮಾಜವಾದಿ ದೇಶಗಳ ಹಿತಾಸಕ್ತಿಗಾಗಿ ತನ್ನ ಬೆಂಬಲವನ್ನು ಅಡೆತಡೆಯಿಲ್ಲದೆ ನೀಡುತ್ತ ಬಂದಿದೆ.

ಸಮಾಜವಾದಿ ದೇಶಗಳು ಮತ್ತು ಬಂಡವಾಳಶಾಹಿ, ಸಾಮ್ರಾಜ್ಯಶಾಹಿ ದೇಶಗಳ ನಡುವೆ ಯಾವುದಾದರೂ ಬಹಿರಂಗ ಕಲಹ ಉಂಟಾದಾಗಲೂ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತನ್ನ ಬೆಂಬಲವನ್ನು ಸಮಾಜವಾದಿ ದೇಶಗಳಿಗೆ ಕೊಡುತ್ತಾ ಬಂದಿದೆ. ಇಲ್ಲಿಯೂ ಕೂಡ, ಆಳುವ ಕಮ್ಯುನಿಸ್ಟ್ ಪಕ್ಷಗಳೊಂದಿಗೆ ಸೋದರ ಸಂಬಂಧಗಳು ಇರಲಿ ಇಲ್ಲದಿರಲಿ, ಮುಂದೆಯೂ ಕೂಡ ಮಾರ್ಕ್ಸ್‌ವಾದಿ ಪಕ್ಷ ತನ್ನ ಸೌಹಾರ್ದ ಕಾರ್ಮಿಕ ಕರ್ತವ್ಯಗಳನ್ನು ನಿರ್ವಹಿಸುವುದರಲ್ಲಿ ಅದು ಯಾವ ತಡೆಯನ್ನೂ ಒಡ್ಡುವುದಿಲ್ಲ.

ನಮ್ಮ ಪ್ರಕಾರ ಬಲ ಅಥವಾ ಎಡ ಅವಕಾಶವಾದಿ ತಪ್ಪುಗಳಿಗೆ ಬಲಿಯಾದ ಯಾವ ಸೋದರ ಪಕ್ಷವನ್ನೂ ಸಹ, ಸೌಹಾರ್ದವುಳ್ಳ ವಿಶ್ವ ಪಕ್ಷಗಳ ಪಟ್ಟಿಯಿಂದ ತೆಗೆದುಹಾಕಬೇಕು ಎಂಬ ಆಲೋಚನೆಗೆ ಸಿ. ಪಿ. ಐ. (ಎಂ) ಬೆಂಬಲ ಕೊಟ್ಟಿಲ್ಲ, ಕೊಡುವುದೂ ಇಲ್ಲ.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ತನ್ನ ನೀತಿ ಮತ್ತು ಕಾರ್ಯಕ್ರಮಗಳನ್ನು ಬೆಂಬಲಿಸಬೇಕೆಂದು ಇತರ ಯಾವುದೇ ಸೋದರ ಪಕ್ಷವನ್ನು ಎಂದೂ ಒತ್ತಾಯಿಸಿಲ್ಲ ಮತ್ತು ಒತ್ತಾಯಿಸುವುದೂ ಇಲ್ಲ. ಸಾಮಾನ್ಯ ಪಕ್ಷ ಪಕ್ಷಗಳ ನಡುವಿನ ಸಂಬಂಧಕ್ಕೆ ಇದನ್ನು ಪೂರ್ವಕರಾರನ್ನಾಗಿ ಒಡ್ಡುವುದೂ ಇಲ್ಲ.

ಕಮ್ಯುನಿಸ್ಟ್ ಮ್ಯಾನಿಫೆಸ್ಟೋ ಬಂದ ನಂತರದ 130 ವರ್ಷಗಳಲ್ಲಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯು ಈಗ ಇರುವಷ್ಟು ಬಲಿಷ್ಠವಾಗಿ ವಿಶಾಲವಾಗಿ ಹಿಂದೆಂದೂ ಇರಲಿಲ್ಲ. ಈಗ ಇರುವಷ್ಟು ತೀವ್ರ ಭಿನ್ನಾಭಿಪ್ರಾಯಗಳು, ವಿಭಜನೆಗಳು, ಕಲಹಗಳು ಹಿಂದೆಂದೂ ಇರಲಿಲ್ಲವೆಂಬುದೂ ನಿಜ. ಇದು ವಿರೋಧಾಭಾಸ ಎನಿಸಿದರೂ ನಿರ್ವಿವಾದವಾದ ವಿಚಾರ.

ವಿನಾಶಕಾರಿ ಪರಿಣಾಮ :

ಅಧಿಕಾರದಲ್ಲಿರುವ ಕಮ್ಯುನಿಸ್ಟ್ ಪಕ್ಷಗಳು ತಮ್ಮತಮ್ಮ ಸೈದ್ಧಾಂತಿಕ-ರಾಜಕೀಯ ನಿಲುವುಗಳನ್ನು ರಕ್ಷಿಸಿಕೊಳ್ಳಲು ರಾಷ್ಟ್ರದ ಯಂತ್ರವನ್ನು ಉಪಯೋಗಿಸಿಕೊಂಡಾಗ, ಉದಾಹರಣೆಗೆ, 1969ರಲ್ಲಿ ಸೋವಿಯೆತ್ ದೇಶ ಮತ್ತು ಚೀನದ ನಡುವೆ, 1976-77 ರಲ್ಲಿ ಮೊದಲಿನ ಕಂಪೂಚಿಯ ಆಡಳಿತ ಮತ್ತು ಸಮಾಜವಾದಿ ವಿಯೆಟ್‌ನಾಮ್ ನಡುವೆ, ನಡೆದ ಹೋರಾಟಗಳು, 1979ರಲ್ಲಿ ಚೀನದ ಪಡೆಗಳು ವಿಯೆಟ್‌ನಾಮ್ ಗಡಿಯ ಮೇಲೆ ಆಕ್ರಮಣ ಮಾಡಿದ್ದು,- ಹೀಗೆ ಆದಾಗ ಅವುಗಳ ನಡುವಿನ ಭಿನ್ನಾಭಿಪ್ರಾಯಗಳು ತೀವ್ರ ಸ್ವರೂಪವನ್ನು ತಾಳುತ್ತವೆ. ಚೀನದ ಕಮ್ಯುನಿಸ್ಟ್ ಸರ್ಕಾರವು ವಾರ್ಸಾ ಒಪ್ಪಂದವನ್ನು ಆಕ್ರಮಣಕಾರಿ ಮಿಲಿಟರಿ ಒಪ್ಪಂದವೆಂದು ಬಹಿರಂಗವಾಗಿ ತಿರಸ್ಕರಿಸಿ, ಅಮೆರಿಕದ ಸಾಮ್ರಾಜ್ಯಶಾಹಿ ನಾಯಕತ್ವದ ನ್ಯಾಟೋ ಒಪ್ಪಂದವನ್ನು ರಕ್ಷಣಾ ಒಪ್ಪಂದವೆಂದು ಕರೆದಿರುವುದು ಇವೆಲ್ಲವೂ ಇವತ್ತಿನ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯಲ್ಲಿರುವ ಅಂತರ ಪಕ್ಷ ಮತ್ತು ಅಂತರರಾಷ್ಟ್ರ ಭಿನ್ನಾಭಿಪ್ರಾಯಗಳು ಮತ್ತು ಒಡಕುಗಳ ಮಟ್ಟವನ್ನು ಎತ್ತಿ ತೋರಿಸುತ್ತವೆ.

ಸಾಮ್ರಾಜ್ಯಶಾಹಿ ಭಿನ್ನಾಭಿಪ್ರಾಯಗಳನ್ನು ಕಾರ್ಮಿಕ ಧ್ಯೇಯಗಳ ಮುನ್ನಡೆಗಾಗಿ ಸಮಾಜವಾದಿ ದೇಶಗಳು ಬಳಸಿಕೊಳ್ಳುವುದರ ಬದಲು, ಚೀನ-ಸೋವಿಯೆತ್ ಭಿನ್ನಾಭಿಪ್ರಾಯಗಳನ್ನು ತಮ್ಮ ವಿಶ್ವ ಯೋಜನೆಗಳಿಗಾಗಿ ಅಮೇರಿಕದ ಸಾಮ್ರಾಜ್ಯಶಾಹಿಗಳು ಬಳಸಿಕೊಳ್ಳುತ್ತಿದ್ದಾರೆ. ಕಮ್ಯುನಿಸ್ಟ್ ಪಕ್ಷಗಳ ನಡುವೆ ಇರುವ ಪ್ರತಿಯೊಂದು ಭಿನ್ನಾಭಿಪ್ರಾಯವನ್ನೂ, ಕಾರ್ಮಿಕರು, ರೈತರು ಮತ್ತಿತರ ದುಡಿಯುವ ವರ್ಗಗಳಲ್ಲಿ ಮಾರ್ಕ್ಸ್‌ವಾದದ ಬಗ್ಗೆ ಅಪನಂಬಿಕೆ ಮೂಡಿಸಲು ಸಾಮ್ರಾಜ್ಯಶಾಹಿಗಳು ಬಳಸಿಕೊಳ್ಳುತ್ತಾರೆ? ಅಂತರರಾಷ್ಟ್ರೀಯ ಪರಿಸ್ಥಿತಿಯ ಇಂಥ ಸೂಕ್ಷ್ಮ ಹಿನ್ನೆಲೆಯಲ್ಲಿ, ಕಮ್ಯುನಿಸ್ಟ್ ಪ್ರದೇಶಗಳ ನಡುವಿನ ಸೋದರ ಸಂಬಂಧಗಳ ಪ್ರಶ್ನೆಯು ನಮ್ಮ ಮುಂದೆ ಚರ್ಚೆ ಮತ್ತು ನಿರ್ಧಾರಕ್ಕೆ ಬಂದಿದೆ.

ಸೋದರ ಸಂಬಂಧಗಳು :

ವಿಶ್ವ ಕಮ್ಯುನಿಸ್ಟ್ ಚಳುವಳಿ ಮತ್ತು ಅದರ ಬಲವರ್ಧನೆ ಮತ್ತು ಸಮಾಜವಾದಿ ದೇಶಗಳ ಐಕ್ಯತೆಗೆ ನಿಷ್ಠವಾಗಿರುವ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು, ಜಗತ್ತಿನ ಪ್ರತಿಯೊಂದು ಕಮ್ಯುನಿಸ್ಟ್ ಮತ್ತು ಕಾರ್ಮಿಕ ಪಕ್ಷಗಳ ಜೊತೆ ಸೋದರ ಸಂಬಂಧಗಳನ್ನು ಸ್ಥಾಪಿಸಿಕೊಳ್ಳುವುದರಲ್ಲಿ ಒದಗುವ ಪ್ರತಿಯೊಂದು ಅವಕಾಶವನ್ನೂ ಉಪಯೋಗಿಸಿಕೊಳ್ಳುತ್ತದೆ. ಸೋದರ ಪಕ್ಷಗಳೊಡನೆ ಸಂಬಂಧಗಳನ್ನು ಬೆಸೆದುಕೊಳ್ಳುವ ಯಾವ ಅವಕಾಶವನ್ನೂ ಅದು ಬಿಟ್ಟುಕೊಡುವುದಿಲ್ಲ. ನಮ್ಮ ದೇಶದ 600 ಮಿಲಿಯನ್ ಜನಸಂಖ್ಯೆಯ ಅಗಾಧತೆಗೆ ಹೋಲಿಸಿದರೆ ನಮ್ಮ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಒಂದು ಸಣ್ಣ ಶಕ್ತಿಯೇ ಎಂಬ ಅರಿವು ನಮಗಿದೆ. ಆದರೂ ಕೂಡ ವಿಶ್ವ ಚಳುವಳಿಯ ಐಕ್ಯತೆಯನ್ನು ವೃದ್ಧಿಪಡಿಸುವುದರಲ್ಲಿ ತನ್ನ ಅಂತರರಾಷ್ಟ್ರೀಯ ಕಾರ್ಮಿಕ ಕರ್ತವ್ಯಗಳು ಮತ್ತು ಜವಾಬ್ದಾರಿಗಳ ಬಗ್ಗೆಯೂ ಅದಕ್ಕೆ ಸಂಪೂರ್ಣ ಅರಿವಿದೆ.

ಯಾವುದೇ ಕಮ್ಯುನಿಸ್ಟ್ ಅಥವಾ ಕಾರ್ಮಿಕ ಪಕ್ಷವು ಸೋದರ ಸಂಬಂಧಗಳನ್ನು ಬೆಸೆಯಲು ನೀಡಿರುವ ಆಹ್ವಾನವನ್ನು ನಾವು ನಿರಾಕರಿಸಿರುವ ಉದಾಹರಣೆ ಇಲ್ಲ. ಇದೇ ಧೋರಣೆಯನ್ನು ನಾವು ಸೋವಿಯೆತ್ ದೇಶ ಮತ್ತು ಚೀನಗಳ ಕಮ್ಯುನಿಸ್ಟ್ ಪಕ್ಷಗಳ ಬಗ್ಗೆಯೂ ಅನುಸರಿಸಿದ್ದೇವೆ. ನಾವು ಯಾವಾಗಲೂ ಅಂಥವನ್ನು ಸ್ವಾಗತಿಸುತ್ತೇವೆ ಮತ್ತು ಈ ಬಗ್ಗೆ ನಮ್ಮ ಕರ್ತವ್ಯವನ್ನು ನಿರ್ವಹಿಸುವ ಪ್ರಯತ್ನ ಮಾಡಿದ್ದೇವೆ. ನಮ್ಮನ್ನು "ಸೋವಿಯೆತ್ ಪರ" ಅಥವಾ "ಚೀನಾಪರ" ಎಂದು ಕುಕ್ಕುವ ಟೀಕಾಕಾರರ ಬಗ್ಗೆ ನಮಗೆ ಭಯವಿಲ್ಲ ನಾವು "ಸಮಾಜವಾದಿ ಪರ" ಮತ್ತು "ಕಮ್ಯುನಿಸ್ಟ್ ಪರ". ನಾವು ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯ ಉಗ್ರ ವಿರೋಧಿಗಳು, ನಾವು ಯಾವುದೇ ದೇಶಗಳ ಬಗ್ಗೆ "ಇದರ ಪರ" "ಅದರ ಪರ" ಅಲ್ಲ. ನಾವು ಊಳಿಗಮಾನ್ಯತೆ, ಏಕಸ್ವಾಮ್ಯ ಬಂಡವಾಳಶಾಹಿ ಮತ್ತು ಸಾಮ್ರಾಜ್ಯಶಾಹಿಯನ್ನು ತೀವ್ರವಾಗಿ ವಿರೋಧಿಸುತ್ತೇವೆ.

ಸೋವಿಯೆತ್ ಮತ್ತು ಚೀನದ ಕಮ್ಯುನಿಸ್ಟ್ ಪಕ್ಷಗಳೂ ಸೇರಿದಂತೆ, ವಿಶ್ವದ ಅನೇಕ ಕಮ್ಯುನಿಸ್ಟ್ ಪಕ್ಷಗಳ ನಡುವೆ ಪಕ್ಷ-ಪಕ್ಷಗಳ ಸಂಬಂಧ ಸ್ಥಾಪಿಸುವ ಪ್ರಯತ್ನ ನಡೆದಿರುವುದು ನಿಜ. ಅವು ಸಫಲವಾದಾಗ ನಾವು ಅದನ್ನು ಬಹಿರಂಗವಾಗಿ ಘೋಷಿಸುತ್ತೇವೆ. ಇಲ್ಲಿ ಯಾವ ಪಿಸುಮಾತೂ ಬೇಡ. ಇದನ್ನು ಸಫಲವಾಗುವವರೆಗೂ ಬಹಿರಂಗಗೊಳಿಸಲು ನಾವು ಹೆದರುತ್ತೇವೆ-ಏಕೆಂದರೆ ಬೂರ್ಜ್ವಾ ಪತ್ರಿಕೋದ್ಯಮದ ನಮ್ಮ "ಗೆಳೆಯರು" ಇದರಲ್ಲಿ ಹುಡುಗಾಟ ಆಡಬಹುದು.

○

ಮಹಿಳಾ ಸಂಘರ್ಷ ವೇದಿಕೆ ರಚನೆ

ದೇಶದಾದ್ಯಂತ ದುಡಿಯುವ ಮಹಿಳೆಯರ ಸಂಘಟನೆ ಬಲಗೊಳ್ಳುತ್ತಿದೆ. ಆದರೆ ಮಹಿಳೆ ಉದ್ಯೋಗಿಯಾಗಿ ಮಾತ್ರವಲ್ಲ, ಒಬ್ಬ ಮಹಿಳೆಯಾಗಿಯೂ ಶೋಷಿತಳಾಗಿದ್ದಾಳೆ. ಕುಟುಂಬ, ಸಮಾಜ ಇವುಗಳಲ್ಲಿ ಆಕೆ ಅನೇಕ ಶೋಷಣೆಗೆ ತುತ್ತಾಗುತ್ತಾಳೆ. ಹಲವಾರು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಾಳೆ. ನಗರದ ಮಹಿಳೆಯರ ಸಮಸ್ಯೆಗಳು ಒಂದು ಥರವಾದರೆ ಗ್ರಾಮೀಣ ಮಹಿಳೆಯರ ಸಮಸ್ಯೆಗಳು ಇನ್ನೊಂದು ಬಗೆ. ಆದರೆ ಎಲ್ಲ ಸಮಸ್ಯೆಗಳ ಮೂಲ ಈ ಶೋಷಣಾ ವ್ಯವಸ್ಥೆ. ಇವೆಲ್ಲದರ ಬಗ್ಗೆ ಮಹಿಳೆಯರಿಗೆ ಅರಿವು ಮೂಡಿಸಿ ಅವರು ತಮ್ಮ ಸಮಸ್ಯೆಗಳ ಬಗ್ಗೆ ತಾವೇ ಹೋರಾಡುವಂತೆ ಜಾಗೃತರನ್ನಾಗಿ ಮಾಡುವ ಅವಶ್ಯಕತೆಯಿದೆ. ಈ ದಿಸೆಯಲ್ಲಿ ಕರ್ನಾಟಕದಲ್ಲಿ ಒಂದು ಪ್ರಯತ್ನವನ್ನು ಆರಂಭಿಸಲಾಗಿದೆ.

21-9-80ರಂದು ಬೆಂಗಳೂರಿನಲ್ಲಿ ಹಲವು ವೃತ್ತಿ, ರಂಗಗಳ ಮಹಿಳೆಯರು ಒಂದೆಡೆ ಸೇರಿ ಈ ಬಗ್ಗೆ ಚರ್ಚಿಸಿದರು. "ದುಡಿಯುವ ಮಹಿಳೆ" ಎನ್ನುವ ಪದ ತುಂಬಾ ವಿವಾದಕ್ಕೊಳಗಾಯಿತು. ಕಚೇರಿ, ಬ್ಯಾಂಕು, ಹೊಲಗದ್ದೆಗಳಲ್ಲಿ ದುಡಿಯುವವರು ಮಾತ್ರ ದುಡಿಯುವ ಮಹಿಳೆಯರಲ್ಲ. ಆ ರೀತಿಯ ವಿಭಾಗವೇ ಸರಿಯಲ್ಲ. ಎಲ್ಲ ಮಹಿಳೆಯರೂ ಮನೆ, ಕುಟುಂಬಗಳ ವಲಯದಲ್ಲಿ ದುಡಿಯುವವರೇ. ಆದ್ದರಿಂದ ಎಲ್ಲ ಮಹಿಳೆಯರೂ "ದುಡಿಯುವ ಮಹಿಳೆಯರೇ" ಎಂದು ಅನೇಕ ಮಹಿಳೆಯರು ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು. ಶಿಕ್ಷಣ ಕ್ಷೇತ್ರ, ಬ್ಯಾಂಕು, ಗ್ರಾಮೀಣ ವಲಯ, ವಯಸ್ಕರ ಶಿಕ್ಷಣ ಮುಂತಾದ ರಂಗಗಳಲ್ಲಿ ಕೆಲಸ ಮಾಡುತ್ತಿರುವ ಮಹಿಳೆಯರು ಇಲ್ಲಿ ಸೇರಿದ್ದರು.

ಧಾರ್ಮಿಕ, ಸಾಮಾಜಿಕ, ಆರ್ಥಿಕ, ಕೌಟುಂಬಿಕ ಶೋಷಣೆಯ ವಿರುದ್ಧ ಮಹಿಳೆಯರಿಗೆ ಅರಿವು ಮೂಡಿಸಿ, ನವ ಸಮಾಜದ ನಿರ್ಮಾಣದತ್ತ ಅವರ ಪ್ರಜ್ಞೆಯನ್ನು ರೂಪಿಸಲು "ಮಹಿಳಾ ಸಂಘರ್ಷ ವೇದಿಕೆ" ರಚನೆಯಾಗಿದೆ. ಹೊಸ ಮೌಲ್ಯಗಳಿಗೆ ಹಾತೊರೆಯುವ ಎಲ್ಲ ಮಹಿಳೆಯರಿಗೂ ಇದರ ಸದಸ್ಯರಾಗಲು ಸ್ವಾಗತವಿದೆ.

●

ಜಿಲ್ಲಾ ರೈತಸಂಘದ ಸಭೆ

ದಕ್ಷಿಣ ಕನ್ನಡ ಜಿಲ್ಲಾ ರೈತಸಂಘದ ವಿಸ್ತೃತ ಸಮಿತಿಯ ಸಭೆಯು ಕಾಂ. ಅಬ್ರಹಾಂ ಕರ್ಕಡರ ಅಧ್ಯಕ್ಷತೆಯಲ್ಲಿ ಬೋಳಾರ ಆಫೀಸಿನಲ್ಲಿ ಜರುಗಿತು. ಕಾರ್ಯದರ್ಶಿ ಕಾಂ. ಜನಾರ್ದನ ನ್ಯಾಕರು ಕಳೆದ ಒಂದು ತಿಂಗಳಲ್ಲಿ ಜಿಲ್ಲೆಯ ವಿವಿಧ ಭಾಗಗಳಲ್ಲಿ ನಡೆದ ಸಂಘದ ಕಾರ್ಯಕಲಾಪಗಳನ್ನು ವಿವರಿಸಿ ಜಿಲ್ಲೆಯಾದ್ಯಂತವಾಗಿ ಭೂನ್ಯಾಯಮಂಡಳಿಗಳಲ್ಲಿ, ಸರಕಾರಿ ಸಂಘ, ತಕ್ಕಾವಿ ಸಾಲಗಳ ವಸೂಲಿಯಲ್ಲಿ ರೈತರಿಗಾಗುತ್ತಿರುವ ಕಷ್ಟನಷ್ಟಗಳನ್ನೂ, ಭ್ರಷ್ಟಾಚಾರ ವಂಚನೆಗಳನ್ನೂ ಹೇಳಿ ಈ ಬಗ್ಗೆ ಕೂಡಲೇ ತಕ್ಕ ಚಳುವಳಿಗಳನ್ನು ಸಂಘಟಿಸುವ ಕುರಿತು ಒತ್ತಿ ಹೇಳಿದರು. ಬಳಿಕ ನಡೆದ ವರದಿಗಳ ಮೇಲಿನ ಚರ್ಚೆಯಲ್ಲಿ ಕಾಮ್ರೇಡರಾದ ಕೆ. ವಿ. ರಾವ್, ವಾಸುಗಟ್ಟಿ, ಮೋನಪ್ಪಗೌಡ, ಲಕ್ಷ್ಮಣ ಗೌಡ, ರಾಮಸುಂದರ್, ಶಿವರಾಂ ಶೆಟ್ಟಿ ಮೊದಲಾದವರು ಭಾಗವಹಿಸಿ ಬರುವ ತಿಂಗಳು ಜಿಲ್ಲೆಯಾದ್ಯಂತ ಚಳುವಳಿಗಳನ್ನೂ ಡಿಸೆಂಬರ್ ತಿಂಗಳಲ್ಲಿ ಜಿಲ್ಲೆಯ ರೈತರ ಬೃಹತ್ ಮತಪ್ರದರ್ಶನ ಒಂದನ್ನು ಮಂಗಳೂರಿನಲ್ಲಿ ಸಂಘಟಿಸುವರೇ ನಿರ್ಣಯಿಸಲಾಯಿತು. ಸಭೆಯ ಆರಂಭದಲ್ಲಿ ದಿವಂಗತ ಕಾರ್ಮಿಕ ಮುಂದಾಳು ಎ. ಕೆ ನ ರಾಯಣನವರ ಸ್ಮರಣಾರ್ಥ ಮೌನ ಪ್ರಾರ್ಥನೆ ನಡೆಯಿತು. ಸಭೆಯ ಕಾರ್ಯಕಲಾಪಗಳಲ್ಲಿ ಕಾಂ. ಪಿ ರಾಮಚಂದ್ರರಾಯರು ಭಾಗವಹಿಸಿ ಯೋಗ್ಯ ನಿರ್ದೇಶನಗಳನ್ನು ನೀಡಿದರು.

○

ಎಸ್.ಎಫ್.ಐ.ಗೆ ರೋಲಿಂಗ್ ಷೀಲ್ಡ್

ದಿನಾಂಕ 7-9-80 ರಂದು ತಿಪಟೂರಿನಲ್ಲಿ ನಡೆದ ಅಂತರ ರಾಜ್ಯ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಕಲ್ಪತರು ಕಾಲೇಜು ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ, ಎಸ್. ಎಫ್. ಐ. ನ ಕಾಂ. ಉದಯಕುಮಾರ ಪ್ರಥಮ ಸ್ಥಾನ ಪಡೆದರು. ಮತ್ತು ಎಸ್. ಎಫ್. ಐ. ನ ಬಾಬು ಪ್ರಸಾದರು ಸಮಾಧಾನ ಬಹುಮಾನ ಪಡೆದರು. ●

ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವ

ದಿನಾಂಕ 12-9-80ರಂದು ತಿಪಟೂರು ಕಲ್ಪತರುಕಾಲೇಜಿನ ವಿದ್ಯಾರ್ಥಿ ಸಂಘದ ಪ್ರಾರಂಭೋತ್ಸವವನ್ನು ಬೆಂಗಳೂರು ವಿಶ್ವವಿದ್ಯಾಲಯದ ಮಾಜೀ ಉಪಕುಲಪತಿ, ವಿಧಾನ ಪರಿಷತ್ತಿನ ಸದಸ್ಯ ಶ್ರೀಮಾನ್ ಎಚ್. ನರಸಿಂಹಯ್ಯ ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಎಚ್. ಬಿ. ಶಾಂತವೀರಯ್ಯ ವಹಿಸಿದ್ದರು.

●

REG. KRNB-368

MAG (2) PRB DECR 319/78-79

ಸೆಪ್ಟೆಂಬರ್ 28, 1980

ಕಾಂಗ್ರೆ ಗೂಂಡಾಗಳ ಹೇಯಕೃತ್ಯದ ವಿರುದ್ಧ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪ್ರತಿಭಟನೆ

(ಮೂರನೇ ಪುಟದಿಂದ)

"ಪತ್ರಿಕೆಗಳು ಹೆಚ್ಚು ಹೆಚ್ಚಾಗಿ, ಹೋರಾಡುತ್ತಿರುವ ಜನತೆಯ ಹಕ್ಕುಗಳನ್ನು ರಕ್ಷಿಸಲು, ಆಡಳಿತ ಪಕ್ಷದ ದುರಾಡಳಿತವನ್ನು ಖಂಡಿಸಲು, ದುಡಿಯುವ ಜನತೆಯ ಸಂಕಷ್ಟಗಳನ್ನು ಎತ್ತಿ ತೋರಿಸಲು ಮುಂದೆ ಬರಬೇಕೆಂದು ನಾವು ಅಪೇಕ್ಷೆ ಪಡುತ್ತೇವೆ ಆವಾಗ ಮಾತ್ರ ಜನತೆ ಖಂಡಿತವಾಗಿ ಪತ್ರಿಕಾ ಸ್ವಾತಂತ್ರ್ಯದ ಮೇಲಾಗುವ ದಾಳಿಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಲು ಸಹಕರಿಸುತ್ತದೆ".

"ಅಧಿಕಾರದಲ್ಲಿರುವವರ ದುರಾಡಳಿತವನ್ನು ಎತ್ತಿ ತೋರಿಸಿದ್ದಕ್ಕಾಗಿ ಈ ದಾಳಿ ಸಂಯೋಜಿಸಲ್ಪಟ್ಟಿದೆ ಎಂಬುದು ನಮಗೆ ತಿಳಿದಿದೆ."

"ಮಾರ್ಕ್ಸ್‌ವಾದಿ ಪಕ್ಷದ ಬೆಂಗಳೂರು ಘಟಕದ ಪರವಾಗಿ, ಇತರ ಸಾಮೂಹಿಕ ಸಂಘಟನೆಗಳು, ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧದ ತಮ್ಮ ದೃಢ ನಿಲುಮೆಯನ್ನು ಬೆಂಬಲಿಸುತ್ತೇವೆ."

ಪತ್ರಿಕಾ ಕಚೇರಿಗಳನ್ನು, ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿಯುವಲ್ಲಿ, ಪತ್ರಿಕಾಕರ್ತರಿಗೆ, ಸಿಬ್ಬಂದಿಯವರಿಗೆ ನಮ್ಮ ಪಕ್ಷದ ಪರವಾಗಿ ನಾವು ನಮ್ಮ ಬೆಂಬಲವನ್ನು ಖಂಡಿತವಾಗಿ ಕೊಡುತ್ತೇವೆ.

●

ಪರ್ಯಾಯ ರೂಪಿಸುವಲ್ಲಿ ಮುಂದಾಗಲು ಕರೆ

(ಒಂದನೇ ಪುಟದಿಂದ)

ಇನ್ನೂ ಯಶಸ್ವಿಗೊಳಿಸಲು ಪಕ್ಷದ ಎಲ್ಲಾ ಸದಸ್ಯರು, ಹಿತೈಷಿಗಳು ಮತ್ತು ಗೆಳೆಯರೆಲ್ಲರೂ ಹಾಗೂ ಸಂಘಟಿತ ಶ್ರಮಿಕ ವರ್ಗವೂ ಮುಂದಾಗಬೇಕೆಂದು ಹರಿಹರದಲ್ಲಿ ತಾ. 24-9-80ರ ಸಂಜೆ ಸಭಾಂಗಣದಲ್ಲಿ ಕಿಕ್ಕಿರಿದು ಸೇರಿದ್ದವರಿಗೆ ಪಕ್ಷದ ರಾಜ್ಯಸಮಿತಿ ಕಾರ್ಯದರ್ಶಿ ಕಾಂ. ಎಂ. ಕೆ. ಕರೆ ಇತ್ತರು. ಈಗ ಮುಖ್ಯ ಸಮಸ್ಯೆಗಳ ಬಗ್ಗೆ ಹೋರಾಡಲು ಗೆಳೆಯ ಪಕ್ಷಗಳು ಒಂದಾದ ತಕ್ಷಣ ಇದು ಒಂದು ಎಡ ಪ್ರಜಾಪ್ರಭುತ್ವ ಬದಲಿ ಎಂದು ತಿಳಿಯಬಾರದು, ಆದರೆ ಜನತೆಯ ಸಮಸ್ಯೆಗಳ ಬಗ್ಗೆ ಹೋರಾಡುತ್ತಾ, ಮುಂದೆ ರಾಷ್ಟ್ರಮಟ್ಟದಲ್ಲಿ ಒಂದು ಎಡ ಪ್ರಜಾಪ್ರಭುತ್ವ ಬದಲಿಯನ್ನು ರೂಪಿಸಲು ಈಗಿನ ಪ್ರಯತ್ನ ಬುನಾದಿಯನ್ನು ಹಾಕಬಲ್ಲುದು ಎಂದರು ಕಾಂ. ಎಂ. ಕೆ.

ಜನತೆಯು ಅತ್ಯಂತ ಕಷ್ಟದಲ್ಲಿರುವಾಗ, ನಾವು ಮುನ್ನುಗ್ಗಿ, ಜನತೆಯೊಂದಿಗೆ ಸೇರಿ, ಅವರ ಸಮಸ್ಯೆಗಳ ಬಗ್ಗೆ ಹೋರಾಡುತ್ತಾ, ಅವರ ವಿಶ್ವಾಸ ಗಳಿಸಬೇಕು. ನಾವು ಎಂದು ಸುಮ್ಮನೆ ಕೂತಲ್ಲಿ ಚರಿತ್ರೆಯು ನಮ್ಮನ್ನು ಕ್ಷಮಿಸಲಾರದು. ಆದುದರಿಂದ ಜನಕೀಯ ಚಳುವಳಿ ಬೆಳೆಸುತ್ತಾ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳನ್ನು ಬಲಪಡಿಸುತ್ತಾ, ಜಂಟೀ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸುತ್ತಾ ಪರ್ಯಾಯ ರೂಪಿಸಲು ಮುಂದಾಗಲು ಕರೆ ಇತ್ತರು ಎಂ. ಕೆ. ಯವರು.

ರಾಷ್ಟ್ರಾಧ್ಯಕ್ಷರು ಹೊರಡಿಸಿದ ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಯನ್ನು ಮತ್ತು ಬೆಂಗಳೂರಲ್ಲಿ ಕಾಂಗ್ರೆ ಯುವಕರಿಂದ ಪತ್ರಿಕಾ ಕಛೇರಿಗಳ ಮೇಲೆ ನಡೆದ ಧಾಳಿಗಳನ್ನು ಆತ್ಯುಗ್ರವಾಗಿ ಖಂಡಿಸಿದ ಎಂ. ಕೆ ಯವರು ಸರ್ವಾಧಿಕಾರ ಕ್ರಮಗಳನ್ನು ತೀವ್ರವಾಗಿ ವಿರೋಧಿಸಲು ಕರೆಇತ್ತರು. ಹರಿಹರದಲ್ಲಿ ಅತ್ಯಂತ ಶೋಚನೀಯ ಪರಿಸ್ಥಿತಿಯಲ್ಲಿ ವಾಸಿಸುತ್ತಿರುವ ಕೊಳಚೆ ಪ್ರದೇಶದ ನಿವಾಸಿಗಳ ಮೇಲೆ ನಗರಸಭೆ ಮತ್ತು ಸರಕಾರ ನಡೆಸಿರುವ ಧಾಳಿಯನ್ನು ಖಂಡಿಸಿದ ಎಂ. ಕೆ., ಈ ಕಟುಕ ಸರಕಾರವನ್ನು ಸೋಲಿಸುವುದೊಂದೇ ದಾರಿ ಎಂದರು.

ಸಭೆಯಲ್ಲಿ ಭಾಗವಹಿಸಿದ್ದ ಗೆಳೆಯ ಹಾಗೂ ಅಡ್ವೋಕೇಟ್ ಶಿವಾನಂದ ಸ್ವಾಮಿಯವರು, ಸ್ವಾತಂತ್ರ್ಯಾನಂತರ ಜನತೆಯ ಸಮಸ್ಯೆಗಳು ಪರಿಹಾರವಾಗುವ ಬದಲು ದಿನೇದಿನೇ ಹೆಚ್ಚಿವೆ. ಭೂಮಾಲಕ-ಬಂಡವಾಳಶಾಹಿ ಪಕ್ಷಗಳ ಆಡಳಿತ ಜನತೆಗೆ ಸಾಕಾಗಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದಿಂದಲೇ ಬದಲಿ ದಾರಿಯನ್ನು ತೋರಿಸುವುದು ಸಾಧ್ಯ, ಎಂದರು. ಸಭೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ ಕಾರ್ಮಿಕರು, ಅದರಲ್ಲೂ ಮಹಿಳೆಯರು ಮತ್ತು ಎಲ್ಲರನ್ನೂ ಅಭಿನಂದಿಸಿದ ಕಾಂ. ಇಕ್‌ಬಾಲ್ ಹುಸೇನ್ ಅವರು, ಪಕ್ಷದ ತೀರ್ಮಾನಗಳನ್ನು ಜಾರಿಗೊಳಿಸಿ, ಸಂಘಟನೆ ಬಲಪಡಿಸಲು ಮುಂದಾಗಲು ಕರೆ ಇತ್ತರು.

○

ಕಾಂಗ್ರೆ ದಾಳಿಯನ್ನು ಪ್ರತಿಭಟಿಸಿ ಮೈಕೋ ಕಾರ್ಮಿಕರ ಮೆರವಣಿಗೆ

ದಿನಾಂಕ 22-9-80 ರಂದು ಕೆಲವು ಉನ್ಮತ್ತ ಕಾಂಗ್ರೆ ಗೂಂಡಾಗಳು ಮುತ್ತಿಗೆ ಹಾಕಿದ್ದನ್ನು ಪ್ರತಿಭಟಿಸಿ ಮೈಕೋ ಕಾರ್ಮಿಕ ಸಂಘದ ಪರವಾಗಿ ಮೆರವಣಿಗೆ ಹೊರಡಿಸಿ ಎಲ್ಲಾ ಪತ್ರಕರ್ತರಿಗೆ, ಪತ್ರಿಕಾನೌಕರರಿಗೆ ಬೆಂಬಲ ಸೂಚಿಸಲಾಯಿತು.

○

ಪುತ್ತೂರಲ್ಲಿ ರೈತ ಕಾರ್ಮಿಕರ ಬಹಿರಂಗ ಸಭೆ

ತಾ. 21-9-80ರಂದು ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕಿನ ಕಡಬ ಪ್ರದೇಶದ ಮರ್ದಳ ಎಂಬಲ್ಲಿ ರೈತ ಕಾರ್ಮಿಕರ ಬಹಿರಂಗ ಸಭೆಯು ಜರಗಿತು. ಸಭೆಯ ಅಧ್ಯಕ್ಷತೆಯನ್ನು ರಬ್ಬರ್ ತೋಟ ಕಾರ್ಮಿಕ ಮುಖಂಡ ಕಾಂ ಅರ್ಮುಗಂ ಅವರು ವಹಿಸಿದ್ದು, ಮುಖ್ಯಅತಿಥಿಗಳಾಗಿ ದಲಿತ ಕಾರ್ಮಿಕ ನಾಯಕ ಕಾಂ. ಬಿ ರಾಮಕೃಷ್ಣ ಮತ್ತು ರಸ್ತೆಸಾರಿಗೆ ನೌಕರರ ಸಂಘದ ಪುತ್ತೂರು ವಿಭಾಗದ ಕಾರ್ಯದರ್ಶಿಯಾದ ಕಾಂ. ಗೋಪಾಲ ಶೆಟ್ಟಿಯವರು ಉಪಸ್ಥಿತರಿದ್ದರು. ಆರಂಭದಲ್ಲಿ ಕಾಂ. ಸಬೇಸ್ಟಿನ್ ಅವರು ಸ್ವಾಗತಿಸಿ, ಕಾಂ. ಬಿ ರಾಮಕೃಷ್ಣ ಅವರು "ಸಾವಿರಾರು ನದಿಗಳು" ಕ್ರಾಂತಿ ಗೀತೆಯನ್ನು ಹಾಡಿದರು.

ಕಾಂ. ಬಿ. ರಾಮಕೃಷ್ಣನವರು ದೇಶದ ಪ್ರಸಕ್ತ ಪರಿಸ್ಥಿತಿಯ ಬಗ್ಗೆ ವಿವರಿಸುತ್ತಾ, "ಆಳುವ ವರ್ಗವು ಭೂಮಾಲಕ ಬಂಡವಾಳಶಾಹಿ ಆರ್ಥಿಕ ಧೋರಣೆಯನ್ನೇ ಅನುಸರಿಸುವ ಕಾರಣ ಒಂದೆಡೆ ಜೀವನಾವಶ್ಯಕ ಸಾಮಗ್ರಿಗಳ ಬೆಲೆ ಗಗನಕ್ಕೇರಿದೆ, ಜನರ ಕೊಂಡುಕೊಳ್ಳುವ ಶಕ್ತಿ ಕಡಿಮೆಯಾಗಿದೆ. ಇನ್ನೊಂದೆಡೆ ಈ ಆರ್ಥಿಕ ಉಬ್ಬರದ ಲಾಭವನ್ನು 'ಶ್ರೀಮಂತ ಬಂಡವಾಳಶಾಹಿ ವ್ಯಾಪಾರಿಗಳು ಪಡೆಯುತ್ತಿದ್ದಾರೆ ಆಳುವ ಕಾಂಗ್ರೆಸ್ (ಐ) ಸರಕಾರವು ಹೆಜ್ಜೆ ಹೆಜ್ಜೆಗೂ ಕಾರ್ಮಿಕ ರೈತ ವಿರೋಧಿ ನೀತಿಯನ್ನೇ ಅನುಸರಿಸುತ್ತಿದೆ ಎಂದರು. ಹಾಗೂ ಸಿ ಐ ಟಿ. ಯು. ಬಗ್ಗೆ ಐ. ಎನ್ ಟಿ. ಯು. ಸಿ. ಯವರ ಅಪಪ್ರಚಾರವನ್ನು ಉಗ್ರವಾಗಿ ಖಂಡಿಸಿದರು. ಶೋಷಿತ ವರ್ಗದ ವರ್ಗಹೋರಾಟ ದೇಶದ ನಾಲ್ಕು ಮೂಲೆಗಳಿಂದಲೂ ಜ್ವಾಲಾಮುಖಿಯಾಗಿ ಸ್ಫೋಟಿಸುವ ವೇಳೆ, ಹಳ್ಳಿಯ ರೈತ ಕಾರ್ಮಿಕರು ತಮ್ಮ ಹಕ್ಕುಬಾಧ್ಯತೆಗಳ ರಕ್ಷಣೆಗಾಗಿ ಕೆಂಬಾವುಟದಡಿಯಲ್ಲಿ ಸಂಘಟಿತರಾದರೆ ಮಾತ್ರ ನಮಗೆ ನ್ಯಾಯ ಸಿಗಲು ಸಾಧ್ಯ, ಎಂದ ಅವರು ತ್ರಿಪುರ, ಪ. ಬಂಗಾಳ, ಕೇರಳ ಸರಕಾರಗಳ ಜನಪರ ಧೋರಣೆಯನ್ನು ವಿವರಿಸಿದರು. ಕಾಂ. ಗೋಪಾಲ ಶೆಟ್ಟಿಯವರು ಮಾತನಾಡುತ್ತಾ ದುಡಿಯುವ ಜನತೆಯ ವರ್ಗಹೋರಾಟದ ಮಹತ್ವವನ್ನು ವಿವರಿಸಿದರು. ಬಡವನಿಗೆ ಭೂಮಿ, ಕಾರ್ಮಿಕನಿಗೆ ಜೀವನಾವಶ್ಯಕ ವೇತನ ಸಿಗಲು, ಶೋಷಣೆಯಿಂದ ಮುಕ್ತರಾಗಲು ಹಳ್ಳಿಯ ಬಡವರು ಕೆಂಪುಧ್ವಜದಡಿಯಲ್ಲಿ ಸಂಘಟಿತರಾಗಬೇಕು, ಕರ್ನಾಟಕ ರಾಜ್ಯ ಸರಕಾರ ತರಲು ಯತ್ನಿಸುವ ಆರ್ಥಿಕ ತುರ್ತುಪರಿಸ್ಥಿತಿ, ಅಗತ್ಯ ಸೇವಾ ಮಸೂದೆಯನ್ನು ಕಿತ್ತೊಗೆಯಲು ಸಂಘಟಿತರಾಗಿ ಹೋರಾಡಲು ಕರೆಯಿತ್ತರು.

ಬಳಿಕ ಕಾಂ. ಗಳಾದ ರಬ್ಬರ್ ತೋಟ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾತ್ತಮುತ್ತು, ನಲ್ಲು, ಶಿವಪ್ಪ ಮೊದಲಾದವರು ಮಾತನಾಡಿದರು. ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಕಾಂ. ಅರ್ಮುಗಂ ಅವರು ವರ್ಗ ಹೋರಾಟದಿಂದ ಮಾತ್ರ ರೈತರ ಕಾರ್ಮಿಕರ ವಿಮೋಚನೆಯಾಗಲು ಸಾಧ್ಯ, ಕಾರ್ಮಿಕರು ರೈತರು ಯಾರದೇ ಅಪಪ್ರಚಾರಕ್ಕೆ ಬಲಿಯಾಗಬಾರದೆಂದು ಕೇಳಿಕೊಂಡ ಅವರು ಸಂಘಟನೆಯನ್ನು ಬಲಪಡಿಸಲು ಕರೆಯನ್ನಿತ್ತರು. ಧನ್ಯವಾದಗಳೊಂದಿಗೆ ಸಭೆಯು ಮುಕ್ತಾಯವಾಯಿತು. ○

ಅಕ್ಟೋಬರ್ ೬ರ ಕಾರ್ಯಕ್ರಮ ಬೆಂಬಲಿಸಲು ಎಸ್. ಎಫ್. ಐ. ಕರೆ

ಅಕ್ಟೋಬರ್ 6ರಂದು ರಾಜ್ಯದ ಎಲ್ಲಾ ಉದ್ಯೋಗ ವಿನಿಮಯ ಕಛೇರಿಗಳ ಮುಂದೆ ಧರಣಿ ನಡೆಸುವ ಡಿ ವೈ. ಓ. ಕಾರ್ಯಕ್ರಮವನ್ನು ಎಸ್. ಎಫ್. ಐ. ರಾಜ್ಯಸಮಿತಿ ಸಂಪೂರ್ಣವಾಗಿ ಬೆಂಬಲಿಸಿದೆ. ಈ ಕಾರ್ಯಕ್ರಮಕ್ಕೆ ಎಸ್. ಎಫ್. ಐ ನ ಎಲ್ಲಾ ಶಾಖೆಗಳ ಕಾರ್ಯಕರ್ತರು ಸಕ್ರಿಯ ಬೆಂಬಲ ನೀಡಬೇಕೆಂದು ಪ್ರಧಾನ ಕಾರ್ಯದರ್ಶಿ ಎಸ್. ಆರ್. ಆರಾಧ್ಯ ಕರೆ ನೀಡಿದ್ದಾರೆ.

●

ಭದ್ರಾವತಿಯಲ್ಲಿ ಧರಣಿ ಬಹಿರಂಗ ಸಭೆಗಳ ಸಿದ್ಧತೆ

ದಿನಾಂಕ 21-9-80 ರಂದು ಭಾರತ ಕಮ್ಯುನಿಸ್ಟ್ ಪಕ್ಷ ಮತ್ತು ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)ಗಳ ಕಾರ್ಯಕರ್ತರ ಜಂಟಿ ಸಭೆ ಭದ್ರಾವತಿಯಲ್ಲಿ ನಡೆಯಿತು.

ಕಾಂ. ಎಸ್.ಎಂ ವೆಂಕಟಪ್ಪನವರು (CPI) ಅಧ್ಯಕ್ಷತೆ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಮಹಮದ್ ರಫಿಯವರು (CPM) ಸ್ವಾಗತಿಸಿದರು. ಸಭೆಯನ್ನುದ್ದೇಶಿಸಿ CPI ಶಿವಮೊಗ್ಗ ಜಿಲ್ಲಾ ಕಾರ್ಯದರ್ಶಿ ಕಾಂ. ಡಿ.ಸಿ. ಮಾಯಣ್ಣ ಮತ್ತು ಯುವಜನ ಫೆಡರೇಶನ್ ಕಾರ್ಯಕರ್ತ ಕಾಂ. ಎ ಕೆ. ನಾಗೇಶ್ ಮಾತನಾಡಿದರು.

ಸಭೆಯಲ್ಲಿ, ರಾಜ್ಯದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಚರ್ಚಿಸಿ ಸಿ. ಪಿ ಐ (ಎಂ) ಮತ್ತು ಸಿ ಪಿ. ಐ.ಗಳ ವತಿಯಿಂದ ಭದ್ರಾವತಿ ತಾಲ್ಲೂಕು ಕಛೇರಿ ಮುಂದೆ ದಿನಾಂಕ 29-9-1980 ರಂದು ಧರಣಿ ಸತ್ಯಾಗ್ರಹ ನಡೆಸುವಂತೆ ತೀರ್ಮಾನಿಸಲಾಯಿತು. ಈ ಸಂಬಂಧವಾಗಿ ಅಂದು ಬೆಳಗ್ಗೆ 10ಗಂಟೆಗೆ ಎರಡೂ ಪಕ್ಷಗಳ ಕಾರ್ಯಕರ್ತರು ಬಸ್ ಸ್ಟ್ಯಾಂಡಿನಿಂದ ಮೆರವಣಿಗೆ ಹೊರಟು ತಾಲ್ಲೂಕು ಕಛೇರಿ ಮುಂಭಾಗದಲ್ಲಿ ಧರಣಿ ನಡೆಸಿ ಸಂಜೆ 5ಘಂಟೆಗೆ ರಂಗಪ್ಪ ಸರ್ಕಲ್‌ನಲ್ಲಿ ಬಹಿರಂಗ ಸಭೆ ನಡೆಸಲು ತೀರ್ಮಾನಿಸಲಾಯಿತು. ಬೆಲೆ ಏರಿಕೆಯ ವಿರುದ್ಧವೂ ಮುಂಬರುವ ದಿನಗಳಲ್ಲಿ ಜಂಟಿ ಹೋರಾಟ ನಡೆಸುವ ಬಗ್ಗೆ ಸಭೆಯಲ್ಲಿ ಒಮ್ಮತದ ಅಭಿಪ್ರಾಯ ವ್ಯಕ್ತವಾಯಿತು.

●

ಬೆಂಗಳೂರು ಜಿಲ್ಲಾ ಡಿ. ವೈ. ಓ. ಆಶ್ರಯದಲ್ಲಿ ಧರಣಿ ಕಾರ್ಯಕ್ರಮ

ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನಡೆಯುವ ಭ್ರಷ್ಟಾಚಾರ, ಸ್ವಜನ ಪಕ್ಷಪಾತಗಳನ್ನು ಪ್ರತಿಭಟಿಸಿ ದಿನಾಂಕ 6-10-80ರಂದು ಧರಣಿ ಸತ್ಯಾಗ್ರಹ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಬೆಂಗಳೂರು ಯುವಜನರಿಗೆ ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ಡಿ ವೈ ಓ. ಕೋರಿದೆ.

●

ಸಿದ್ಧಾಪುರದಲ್ಲಿ ಸರಕಾರಿ ಆಸ್ಪತ್ರೆಯ ಮುಂದೆ ಧರಣಿ

ಕೊಡಗಿನ, ಸಿದ್ಧಾಪುರ ಪಂಚಾಯತ್‌ನಲ್ಲಿ ಸುಮಾರು 10,000 ಕಾರ್ಮಿಕರಿಗಾಗಿ ಒಂದು ಸರ್ಕಾರೀ ಆಸ್ಪತ್ರೆಯಿದ್ದರೂ, ಅಲ್ಲಿ ಒಂದು ತಿಂಗಳುಗಳಿಂದಲೂ ಒಬ್ಬ ವೈದ್ಯ ನಿಲ್ಲದ ಸ್ಥಿತಿಯನ್ನು ವಿರೋಧಿಸಿ, ತಕ್ಷಣ ವೈದ್ಯನ ನೇಮಕ ಮಾಡಬೇಕೆಂದು ಕೇಳಿಕೊಂಡು ತಾ. 21-[illegible]-80 ರಂದು ಸುಮಾರು ನೂರು ಜನ ಕಾರ್ಮಿಕರೂ, ಸಿ ಪಿ ಐ. (ಎಂ) ಕಾರ್ಯಕರ್ತರೂ ಆಸ್ಪತ್ರೆಯ ಮುಂದೆ ಧರಣಿ ಸತ್ಯಾಗ್ರಹ ಕೈಗೊಂಡರು.

ಸತ್ಯಾಗ್ರಹದ ನಂತರ, ಪಟ್ಟಣದಲ್ಲಿ ಸೇರಿದ ಬಹಿರಂಗ ಸಭೆಯಲ್ಲಿ ಕಾಂ. ರಾಜರವರು ಅಧ್ಯಕ್ಷತೆ ವಹಿಸಿ, ಕಾಂ. ಲತೀಫ್‌ಕುರಿಪ್ಪನ್, ಕಾಂ. ಕರುಪ್ಪಾಸ್ವಾಮಿ, ಕಾಂ. ಗಣೇಶ್, ಕಾಂ ಕುಟ್ಟಪ್ಪನ್ ಮೊದಲಾದವರು ಮಾತನಾಡಿದರು.

●

Printed by P. Ramachandra Rao at Nutan Printing Publishing & Training Centre, 405, Sampige Road, Malleswaram Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT